

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 32 | Sunday 06-10-2024 | E-mail : maruti.b.hosamani76@gmail.com | Page: 4 | Price : Rs. 1/-


## "ಜಯದ ಕಹಳೆ ವಿಜಯ ದಶಮಿ"




ಹೊಸ ಮಂತರ ಶತ್ರುನಾಶಕ
ಶಮೀವೃಕ್ಷ ಶಕ್ತಿಮಾತೆ ಪೂಜಿತ
ವಿಜಯದಿ ಪೂಜೆ ಶಮೀ ಶಮಯತೇ
ಪಾಪಂ ಶಮೀ ಶತ್ರುವಿನಾಶನಿ
ನವ ರೂಪ ಅವತಾರಿ ಶೈಲಪುತ್ರಿದೇವಿ
ಆನಂದದ ಬೆಳಕು
ಬ್ರಹ್ಮಚಾರಿಣಿ ದೇವಿ ಸರ್ವಜನಹಿತ ಹಸಿರು
ಚಂದ್ರಘಂಟಾ ದೇವತೆ ಸ್ಥಿರತೆ ಸಾಮರಸ್ಯ
ಕೂಷ್ಮಾಂಡಾ ದೇವಿ ಹರುಷ ಉತ್ಸಾಹ ಸ್ಥಿರ ಶಕ್ತಿ
ಸ್ಕಂದಾಮಾತಾ ದೇವಿ ಶಾಂತಿ ಶುದ್ಧತೆ
ಕಾತ್ಯಾಯನಿ ದೇವಿ ಶಕ್ತಿ ಉತ್ಸಾಹ
ಕಾಳರಾತ್ರಿದೇವಿ ಶಕ್ತಿ ಉತ್ಸಾಹ
ಮಹಾಗೌರಿ ದೇವಿ ಸಹಾನುಭೂತಿ ಸಾಮರಸ್ಯ ಪ್ರೀತಿ
ಸಿದ್ದಿದಾತ್ರಿ ದೇವಿ ಆಧ್ಯಾತ್ಮಿಕ ಪ್ರಕೃತಿ ಸಮೃದ್ಧಿ
ಭಕ್ತಿಭಾವದಿ ನಲಿಯುವವರಿಗೆ
ನವ ಶ್ರೀದುರ್ಗಾ ಮಾತಾ ವರಪ್ರದಾಯನಿ
ದುಷ್ಟತನ ನಾಶ ಶಿಷ್ಟತನ ರಕ್ಷಣಾದಿನ
ಅಹಂ ಜಾಡಿಸಿ ಓಡಿಸುವ ಘಳಿಗೆ
ಮನದ ಅಂಧಕಾರ ಕಳೆವ ಧೈರ್ಯ ಸಮೃದ್ಧಿಗಾಗಿ
ಶ್ರೀ ಚಾಮುಂಡಿ ನೆನವ ಮಕ್ಕಳ ಅಕ್ಷರಾಭ್ಯಾಸ
ಶುಭ ಅಮೃತಮಯ ಮನದ ಸುಭಾವ
ಆತ್ಮ ಜಾಗೃತ ಸುದಿನ ಕೆಟ್ಟ ದುಷ್ಟತನ ವಿರುದ್ಧ ಉತ್ತಮತನದಿ ಮೆರವ
ಕ್ಷಣ ವಿಶ್ವ ದೇಶ ನಾಡು ಶಾಂತಿ
ಸೌಹಾರ್ದತೆಯ ಶತ್ರುತ್ವ ನಾಶಕ್ಕಾಗಿ ಸಿಹಿ ಸುಂಗಂಧ ಹರಡುವ
ವಿಜಮ ದಶಮಿ
ಸರ್ವ ಮನುಕುಲ ವಿಜಯದ ಸಂಕೇತ ನಾಡ ದೇವಿಯ ಮಡಿಲಲಿ
ರ?ತಾಪಿ ಶ್ರಮಿಕರ ಸುಗ್ಗಿಯ ಹಿಗ್ಗು ಸುಸ್ವಾಗತ
ನವರಾತ್ರಿ ವಿಜಯ ದಸರಾ ವೃತ ಉಪವಾಸ
ಓಲೈಸುವ ಮಹಾ ದಿನ ವಿಜಯ ದಶಮಿ ಶುಭ ಘಳಿಗೆ ಹರುಷ
ತರಲಿ ಸರ್ವರ ಬಾಳಿನಲಿ



–ಶ್ರೀದೇಶಂಸು
ಶ್ರೀಸುರೇಶ ಶಂಕ್ರೆಪ್ಪ ಅಂಗಡಿ
ಆರೋಗ್ಯ ನಿರೀಕ್ಷಣಾಧಿಕಾರಿ
"ವಿಶ್ವ ಆರೋಗ್ಯ ಸಂಜೀವಿನಿ"
ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು
ಬಾಗಲಕೋಟ

## ಹರೀಶ್.ಹೆಚ್ ಇವರನ್ನು ತಾಲೂಕ ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ಜಿ. ಮಲ್ಲಿಕಾರ್ಜುನಗೌಡ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷರು ಹಾಗೂ ಬಿ ದೊಡ್ಡ ಬಸಪ್ಪರೆಡ್ಡಿ ಮಾಜಿ ಗ್ರಾಮ ಆಡಳಿತ ಅಧಿಕಾರಿಗಳ ರಾಜ್ಯಾಧ್ಯಕ್ಷರ ಉಪಸ್ಥಿತಿಯಲ್ಲಿ ಇಂದು ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು. ಸಭೆಯಲ್ಲಿ ಎಲ್ಲರ ಒಮ್ಮತದ ಅಭಿಪ್ರಾಯದಿಂದ ಗ್ರಾಮ ಆಡಳಿತ ಅಧಿಕಾರಿಯಾದ ಹರೀಶ್ ಹೆಚ್. ಇವರನ್ನು ಕೊಟ್ಟೂರು ತಾಲೂಕ ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ಅನ್ನದಾನೇಶ ಬಿ ಪತ್ತಾರ್, ಗೌರವಾಧ್ಯಕ್ಷರು. ಹನುಮಂತ, ಪ್ರಧಾನ ಕಾರ್ಯದರ್ಶಿ. ಹಾಲಸ್ವಾಮಿ ಎಸ್. ಎಂ, –ಖಜಾಂಚಿ. ರೇಖಾ ಎಸ್, ಉಪಾಧ್ಯಕ್ಷರು. ಎಸ್ ಎಂ ಗುರು ಬಸವರಾಜ, ಜಿಲ್ಲಾ ಪರಿಷತ್ ಸದಸ್ಯರು. ನವೀನ, ಸಂಘಟನಾ ಕಾರ್ಯದರ್ಶಿ. ಮಂಜುನಾಥ, ಜಂಟಿ ಕಾರ್ಯದರ್ಶಿ. ಶಿವಕುಮಾರ್ ಡಿ, ಆಂತರಿಕ ಲೆಕ್ಕ ಪರಿಶೋಧಕರು. ಇವರನ್ನು ಆಯ್ಕೆ ಮಾಡಲಾಯಿತು.

ಈ ಸಮಯದಲ್ಲಿ ವಿಜಯನಗರ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನಗೌಡ ಇವರು ನೌಕರರು ಸಂಘಟಿತರಾದರೆ ಮಾತ್ರ ಬೇಡಿಕೆಗಳನ್ನು



ಈಡೇರಿಸಿ ಕೊಳ್ಳಲು ಹಾಗೂ ಬಾಹ್ಯವಾಗಿ ಯಾವುದೇ ಶಕ್ತಿಗಳು ಎದುರಾದ–ರೆ ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ. ಕಂದಾಯ ಇಲಾಖೆ ಎಲ್ಲಾ ಇಲಾಖೆಗಳಿಗೂ ಮಾತೃ ಇಲಾಖೆಯಾಗಿದ್ದು, ಸಂಘಟಿತರಾಗಲು ಸಂಘದ ಅವಶ್ಯಕತೆ ಇದೆ. ಕೊಟ್ಟೂರಿನಲ್ಲಿ ಕಂದಾಯ ಇಲಾಖೆ ಪದಾಧಿಕಾರಿಗಳು ಇಲ್ಲದೇ ಇರುವುದರಿಂದ ಈ ದಿನ ಆ ಕೊರತೆಯನ್ನು ಪೂರ್ಣಗೊಳಿಸಲಾಗಿದೆ. ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಶುಭವನ್ನು ಕೋರುತ್ತಾ, ಮುಂದಿನ ವಾರದಿಂದ ನಡೆಯುವ ಸರ್ಕಾರಿ ನೌರರ ಸಂಘದ ಚುನಾವಣೆಗೂ ಸಹಾ ಇದೇ ರೀತಿ ಅವಿರೋಧವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಇಲಾಖೆಯ ಒಗ್ಗಟ್ಟಿನ ಶಕ್ತಿಯನ್ನು ಪ್ರದರ್ಶಿಸ ಬೇಕೆ–ಂದು ಕಿವಿಮಾತು ಹೇಳಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಅಂಬೇಡ್ಕರ್ ಕಾಲೋನಿ ಅಭಿವೃದ್ಧಿಯಿಂದ ಮರೀಚಿಕೆ

**ಸಿಹಿ ಕಹಿ ಸುದ್ದಿ**

**ಮರಿಯಮ್ಮನಹಳ್ಳಿ :** ಹೋಬಳಿಯ ಜಿ.ನಾಗಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಗರಗ ಗ್ರಾಮದಲ್ಲಿ ಎಸ್ಸಿ ಕಾಲೋನಿಗಳನ್ನು ಅಭಿವೃದ್ಧಿಯಿಂದ ಕಡೆಗಣಿಸಲಾಗಿದೆ ಹಾಗಾಗಿ ಪ್ರತಿ ಸಲ ಮಳೆಗಾಲ ಬಂದಾಗ ಇದೇ ಪರಿಸ್ಥಿತಿ ಎದುರಿಸುತಿದ್ದೇವೆ. ಈ ಬಗ್ಗೆ ಯಾವೊಬ್ಬ ಅಧಿಕಾರಿಗಳು ಸಹ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ .

ಪ್ರತೀವರ್ಷಮಳೆಶುರುವಾಯಿತುಎಂದರೆನೀರಿನಹರಿವುವಿಪರೀತವಾಗುತ್ತದೆ ಕಾಲೋನಿಗಳಲ್ಲಿ ರಸ್ತೆ, ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆ ಮೇಲೆ ನೀರು ಹರಿದು ಮನೆಯೊಳಗೆ ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಗರಗ ಗ್ರಾಮದಲ್ಲಿ ಎಸ್/ಸ್ಸಿ ಜನಾಂಗದ 50 ಮನೆಗಳಿರುವ ಅಂಬೇಡ್ಕರ್ ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಚರಂಡಿ ಕಳೆದ 10 ವರ್ಷಗಳಿಂದ ಮಾಡಿಸದೆ ಇರುವುದರಿಂದ ಪ್ರತೀ ವರ್ಷ ಇಂತಹ ಅನಾಹುತಗಳು ಮರುಕಳಿಸುತ್ತಿವೆ. ಸ್ಥಳೀಯರು ಅಧಿಕಾರಿಗಳಿಗೆ ಹಲವು ಬಾರಿ ಮೌಕಿಕವಾಗಿ, ಪತ್ರದ ಮುಖಾಂತರ ಮನವಿ ಮಾಡಿದರು ಮಾಡಿಸುತ್ತೇವೆಂದು ಹೇಳಿ ನಿರ್ಲಕ್ಷ್ಯ ವಹಿಸಿದ್ದಾರೆ. ಜನ ಪ್ರತಿನಿಧಿಗಳು

**ನಿನ್ನೆ ರಾತ್ರಿ ನಾವು ಮಲಗಿದ ಸಮಯದಲ್ಲಿ ವಿಪರೀತ ಮಳೆ ಬಂದಿದೆ. ಚರಂಡಿ, ರಸ್ತೆ ಇಲ್ಲದ ಕಾರಣ ನೀರು ಮನೆ ಒಳಗೆ ನುಗ್ಗಿದ್ದರಿಂದ ರಾತ್ರಿಯೆಲ್ಲಾ ನಾವು ನಿದ್ದೆ ಮಾಡಿಲ್ಲ. ಅಧಿಕಾರಿಗಳು ನಮ್ಮ ಕೇರಿಯನ್ನು ಗಮನದಲ್ಲಿಟ್ಟುಕೊಂಡು ಮೂಲಭೂತ ಸೌಕರ್ಯಗಳನ್ನು ಕೊಡಬೇಕು.**

**– ತಳವಾರ ಹನುಮಂತಪ್ಪ, ಮನೆ ಮಾಲೀಕ**

ಇತ್ತ ಗಮನ ಹರಿಸುತ್ತಿಲ್ಲ. ಚುನಾವಣೆಗಳು ಬಂದಾಗ ಮಾತ್ರ ನಾವು ನೆನೆಪಾಗುತ್ತೇವೆ. ಈ ಭಾರಿ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಕೈ ಕಾಲು ಮುಗಿದು ಓಟು ಹಾಕಿಸಿ ಕೊಳ್ಳುತ್ತಾರೆ. ನಂತರ ನಮ್ಮ ಗೋಳು ಕೇಳೋರಿರುವುದಿಲ್ಲ, ಈ ಕಡೆ ಇಣಿಕಿಯೂ ನೋಡೋದಿಲ್ಲ. ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ಅಧಿಕಾರಿಗಳ ವಿರುದ್ಧ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸ್ಥಳೀಯರು ಪತ್ರಿ–ಕೆಗೆ ತಿಳಿಸಿದರು. ಇನ್ನೂ ಮುಂದೆ ಯಾದರು ಅಧಿಕಾರಿಗಳು ಈ ಕಡೆ ಗಮನ ಹರಿಸಿ ಅಭಿವೃದ್ಧಿಗೆ ಮುಂದಾಗ ಬೇಕೆಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್.ಹೊಸಪೇಟೆ**



**ಪಂಚಾಯಿತಿಗೆ ಈ ಬಗ್ಗೆ ಮನವಿ ಪತ್ರ ಸಲ್ಲಿಸಿದ್ದೇವೆ, ಅಧಿಕಾರಿಗಳಿಂದ ಯಾವುದೇ ರೀತಿಯ ಸ್ಪಂದನೆ ಬಂದಿರುವುದಿಲ್ಲ. ಎಸ್ಸಿ ಕಾಲೋನಿ ಗಳೆಂದರೆ ಅಧಿಕಾರಿಗಳಿಗೆ ಅದೇಕೋ ನಿರ್ಲಕ್ಷ್ಯ ಗೊತ್ತಿಲ್ಲ ಇದೇ ರೀತಿ ಮುಂದಿನ ದಿನಗಳಲ್ಲಿ ನಿರ್ಲಕ್ಷಿಸಿದರೆ ಕಾನೂನಿನ ಮೊರೆ ಹೋಗ ಬೇಕಾಗುತ್ತದೆ.**

## ಪರಿಸರ ಸಂರಕ್ಷಣೆ ಪ್ರತಿಯೊಬ್ಬ ಜವಾಬ್ದಾರಿ: ಮಹಾಂತೇಶ ಶೆಟ್ಟರ



**ಬಾಗಲಕೋಟೆ :** ಸೇವಾ ಭಾರತಿ ಟ್ರಸ್ಟ್‌ನ ರಜ–ತ ಮಹೋತ್ಸವದ ಪ್ರಯುಕ್ತ ಅನಗವಾಡಿ ಹಾಗೂ ಕಿರಸೂರು ಗ್ರಾಮಗಳಲ್ಲಿ ಸಸಿಗಳನ್ನು ನೆಡಲಾಯಿತು.

ವಿದ್ಯಾಗಿರಿಯ ಬವಿವ ಸಂಘದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಘಟಕಗಳ ಸಹಯೋಗದಲ್ಲಿ ಎರಡು ಗ್ರಾಮಗಳಲ್ಲಿರುವ ಬಸವೇಶ್ವರ ಪ್ರೌಢಶಾಲೆಗಳಲ್ಲಿ ಸಸಿಗಳನ್ನು ನೆಡಲಾಯಿತು. ರಜ–ತ ಮಹೋತ್ಸವದ ಜಿಲ್ಲಾ ಸ್ವಾಗತ ಸಮಿತಿ ಅಧ್ಯಕ್ಷ ಮಹಾಂತೇಶ ಶೆಟ್ಟರ ಅವರು ಮಾತನಾಡಿ, ಸಸಿ ನೆಟ್ಟ ಮಾತ್ರ ಕಾರ್ಯಪೂರ್ಣಗೊಂಡಂತ್ತಲ್ಲ. ಅವುಗಳ ಬೆಳವಣಿಗೆಗೆ ಒತ್ತು ಕೊಡಬೇಕು. ಆ ಬಗ್ಗೆ ವಿದ್ಯಾರ್ಥಿಗಳೇ ಆಸಕ್ತಿ ವಹಿಸಬೇಕೆಂದು ಕಿವಿಮಾತು ಹೇಳಿದರು.

ಸೇವಾಭಾರತಿಟ್ರಸ್ಟ್‌ರಜತಮಹೋತ್ಸವಕಾರ್ಯಕ್ರಮದ ಪ್ರಾಂತಕಾರ್ಯದರ್ಶಿ ಡಾ.ಎಚ್.ಡಿ.ಪಾಟೀಲಅವರು ಮಾತನಾಡಿ, ಸೇವಾ ಭಾರತಿ ಟ್ರಸ್ಟ್ ರಾಜ್ಯದಾದ್ಯಂತ ಸಮಾಜಿಮುಖಿಯಾದ ಸಾಕಷ್ಟು ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ. ಈಗ 25 ವರ್ಷಗಳ ಸಾರ್ಥಕ ಸೇವೆ ಪೂರ್ಣಗೊಳಿಸಿದ್ದಕ್ಕಾಗಿ ಕಾರ್ಯಕ್ರಮವನ್ನು ವಿಶೇಷವಾಗಿ ಆಯೋಜಿಸಲಾಗಿದ್ದು ಆರೋಗ್ಯ,ಶಿಕ್ಷಣ, ಪರಿಸರ ಸಂರಕ್ಷಣೆ ಮುಂತಾದ ಕಾರ್ಯಗಳನ್ನು ಮಾಡಲು ಯೋಜಗಳನ್ನು ಹಾಕಿಕೊಳ್ಳಲಾಗಿದೆ. ಆ ನಿಟ್ಟಿನಲ್ಲಿ ಅನಗವಾಡಿಯಲ್ಲಿ 80ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಕಿರಿಸೂರಿನಲ್ಲಿ ಅರವತ್ತಕ್ಕೂ ಹೆಚ್ಚು ಸಸ್ಯಗಳನ್ನು ನೆಡಲಾಗುವುದು ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ನೋಡಲ್ ಅಧಿಕಾರಿ ಡಾ. ಮಾರುತಿ ಎ.ಪಾಟೋಳಿ, ಭಾಗಿಯಾಗಿ ಸಮಾಜಮುಖಿಯಾಗಿ ಕಾರ್ಯನಿರ್ಸುತ್ತಿರುವ ಇಂತಹ ಟ್ರಸ್ಟಿನೊಂದಿಗೆ ವಿದ್ಯಾರ್ಥಿಗಳು ಭಾಗಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು

ಕಾರ್ಯಕ್ರಮದಲ್ಲಿ ಸೇವಾ ಭಾರತಿ ಟ್ರಸ್ಟಿನ ಆಶ್ರಯಧಾಮದ ಚಂದ್ರು ಹೂಗಾರ ಹಾಗೂ ಬಸವೇಶ್ವರ ಪ್ರೌಢಶಾಲೆ ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.



**ಧಾರ್ಮಿಕ ಹರಟೆ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಾಸ್ಯಕಲಾವಿದ ಗಂಗಾವತಿ ಪ್ರಾಣೇಶ, ನರಸಿಂಹ ಜೋಶಿ, ಮತ್ತು ಬಸವರಾಜ ಮಹಾಮನಿ ಅವರು ನಗೆ ಚಟಾಕಿಗಳೊಂದಿಗೆ ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲಿ ಬದುಕು ಕಟ್ಟಿಕೊಳ್ಳಬೇಕೆಂದು ಸಂದೇಶ ನೀಡಿದರು.**

## ಸರಳ ಬದುಕಿಗೆ ಭಗವದ್ಗೀತೆ, ಗಾಯತ್ರಿ ಮಂತ್ರ ಪಠಣ ಅವಶ್ಯ

**ಬಾಗಲಕೋಟೆ :** ಭಗವದ್ಗೀತೆ ಮತ್ತು ಗಾಯತ್ರಿ ಮಂತ್ರಗಳು ಭಾರತೀಯ ಸಂಸ್ಕೃತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ಸರಳ ಹಾಗೂ ಸಾರ್ಥ–ಕ ಜೀವನಕ್ಕಾಗಿ ಇವು ನೀಡುವ ಸಂದೇಶವು ಅತ್ಯಂತ ಶ್ರೇಷ್ಠವಾಗಿದೆ ಎಂದು ವೇ.ಮೂ. ವೇಣುಗೋಪಾಲಾಚಾರ್ಯ ಅಗ್ನಿಹೋತ್ರಿ ಹೇಳಿದರು.

ನಗರದ ಕಿಲ್ಲಾ ಓಣಿಯ ಡಾ ಕೊಪ್ಪ ಆಸ್ಪತ್ರೆ ಬಳಿ ಶ್ರೀ ರಂಗ ವಿಠ್ಠಲ ಭಜನಾ ಮಂಡಳಿ ಹಾಗೂ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಸಹಯೋಗದಲ್ಲಿ ದಿ. ಕೆ. ಎಸ್. ದೇಶಪಾಂಡೆ ವೇದಿಕೆಯಲ್ಲಿ ಶನಿವಾರ ನಡೆದ ಹರಿದಾಸ ಹಬ್ಬ ಕಾರ್ಯಕ್ರಮದಲ್ಲಿ ವಿಶೇಷ ವ್ಯಾಖ್ಯಾನ ನೀಡಿದರು.

ಭಗವದ್ಗೀತೆ ನಿರಂತರ ಕಾರ್ಯನಿರ್ವಹಣೆ, ಧರ್ಮಪಾಲನೆ ಮತ್ತು ಮನಸ್ಸಿನ ಸಮತೋಲನವನ್ನು ಬೆಳೆಸಲು ತತ್ತ್ವವನ್ನು ಒದಗಿಸುತ್ತದೆ. ಇದರಲ್ಲಿ ದೇವರು ಅರ್ಜುನನಿಗೆ ನೀಡಿದ ಸಲಹೆಗಳು ಮನಸ್ಸಿನ ಶಾಂತಿ, ಮೋಹದಿಂದ ಮುಕ್ತತೆ ಮತ್ತು ಕರ್ತವ್ಯದ ಮಾರ್ಗವನ್ನು ಅನುಸರಿಸುವುದರ ಕುರಿತು ಮಾರ್ಗದರ್ಶನ ನೀಡುತ್ತವೆ.

ಗಾಯತ್ರಿ ಮಂತ್ರವು ಒಂದು ಶಕ್ತಿ ಸದ್ಭಾವನೆಯನ್ನು ಮತ್ತು ಶುದ್ಧತೆಯನ್ನು ಬೆಳೆಸಲು ಮುಖ್ಯವಾಗಿದೆ. ಈ ಮಂತ್ರವನ್ನು ಪ್ರತಿದಿನದ ಜೀವನದಲ್ಲಿ ಜಪಿಸುವ ಮೂಲಕ ವ್ಯಕ್ತಿಯು ತನ್ನ ಆಂತರಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು ಮತ್ತು ಸಮಾಧಾನವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. "ಓಂ ಭೂರ್ಭುವಃ




ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್" ಎಂಬ ಗಾಯತ್ರಿ ಮಂತ್ರವು ವ್ಯಕ್ತಿಯ ಬುದ್ಧಿಯನ್ನು ಶುದ್ಧಗೊಳಿಸಿ, ಸನ್ಮಾರ್ಗವನ್ನು ತೋರಿಸುತ್ತದೆ.

ಇವುಗಳ ಪ್ರಕಾರ ಸರಳ ಜೀವನವನ್ನೂ ಸುಖೀ ಜೀವನವನ್ನೂ ನಡೆಸುವುದು, ಬದುಕಿನಲ್ಲಿ ಸರಳತೆ, ಶಾಂತಿ, ಮತ್ತು ಧ್ಯಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

## ಸ್ವಾಮೀಜಿಗೆ 1 ಕೋಟಿ ರೂ. ಪಂಗನಾಮ ಹಾಕಿದ ಭೂಪ



**ಬಾಗಲಕೋಟೆ :** ಜಿಲ್ಲೆಯ ಗದ್ದನಕೇರಿ ಗ್ರಾಮದ ರಾಮಾರೂಢ ಮಠದಲ್ಲಿ ವ್ಯಕ್ತಿಯೊಬ್ಬರು ಸ್ವಾಮೀ–ಜಿಯೊಬ್ಬರನ್ನು ಬ್ಲಾಕ್ ಮೇಲ್ ಮಾಡಿ ಬರೋಬ್ಬರಿ 1 ಕೋಟಿ ರೂಪಾಯಿ ವಂಚಿಸಿದ ಘಟನೆ ಬೆಳಕಿಗೆ ಬಂದಿದೆ.

ಪರಮ ರಾಮಾರೂಢ ಸ್ವಾಮೀ–ಜಿಗಳಿಗೆ ಮುಧೋಳ ಪಟ್ಟಣದ ಪ್ರಕಾಶ ಎಂಬ ವ್ಯಕ್ತಿ ತಾನು ಡಿವೈಎಸ್ಪಿ, ಎಡಿಜಿಪಿ ಅಂತ ಹೇಳಿಕೊಂಡು ಬ್ಲಾಕ್ ಮೇಲ್ ಮಾಡಿದ್ದಾನೆ.

ಹೋಮ್ ಮಿನಿಸ್ಟರ್ ಕಚೇರಿಯಿಂದ ಮಾಹಿತಿ ಬಂದಿದ್ದು, "ನಿಮ್ಮನ್ನು ಬಂಧಿಸಿ ಜೈಲಿಗೆ ಹಾಕ್ತೇವೆ" ಎಂದು ಹೆದರಿಸಿ, ಬೆಂಗಳೂರಿನಲ್ಲಿ 61 ಲಕ್ಷ ರೂಪಾಯಿ ಮತ್ತು ಹುಬ್ಬಳ್ಳಿಯಲ್ಲಿ 39 ಲಕ್ಷ ರೂಪಾಯಿ ವಸೂಲಿ ಮಾಡಿದ್ದಾನೆ. ಇಷ್ಟಾದರೂ, ಮತ್ತೆ ಮತ್ತೇ ಹಣ ಕೇಳಲು ಮುಂದಾದಾಗ ಆತಂಕಗೊಂಡ ಸ್ವಾಮೀಜಿ ಬಾಗಲಕೋಟೆ ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಅವರನ್ನು ಭೇಟಿ ಮಾಡಿ ತಮ್ಮ ಸಮಸ್ಯೆಯನ್ನು ವಿವರಿಸಿದ್ದಾರೆ.

ಸ್ವಾಮೀಜಿಯ ದೂರು ನಂತರ ಪ್ರಕರಣ ದಾಖಲಾಗಿದ್ದು, ಪೊಲೀಸರು ಪ್ರಕಾಶನನ್ನು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ. ಈ ನಡುವೆ, ಸ್ವಾಮೀಜಿ ಇಷ್ಟು ಹಣ ಕೊಟ್ಟಿದ್ದೇಕೆ ಎಂಬ ವಿಚಾರದಲ್ಲಿ ಜನರಲ್ಲಿ ಕುತೂಹಲ ಮೂಡಿದೆ. ಈ ಪ್ರಕರಣವನ್ನು ಬಾಗಲಕೋಟೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ.

**ಜೆಡಿಎಸ್ ಅಭ್ಯರ್ಥಿ ಪ್ರಕಾಶ**

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ವಶದಲ್ಲಿರುವ ಪ್ರಕಾಶ ಮುಧೋಳನು ಬೆಳಗಾವಿ ಜಿಲ್ಲೆಯ ರಾಮದುರ್ಗ ವಿಧಾನಸಭಾ ಕ್ಷೇತ್ರದಿಂದ 2023 ರಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದ. ಇತನ ವಿರುದ್ಧ ಹಲವು ಕಡೆಗಳಲ್ಲಿ ಅನೇಕ ಪ್ರಕರಣಗಳು ದಾಖಲಾಗಿರುವ ಮಾಹಿತಿ ಇದೆ ಎನ್ನಲಾಗುತ್ತಿದೆ. ಸ್ವಾಮೀಜಿ ವಂಚನೆಗೆ ತುತ್ತಾದ ಘಟನೆ ಜನರಲ್ಲಿ ಬಹಳಷ್ಟು ಕುತೂಹಲ ಮೂಡಿಸಿದೆ. ಇಷ್ಟು ಭಾರೀ ಮೊತ್ತವನ್ನು ಪ್ರಕಾಶನಿಗೆ ಏಕೆ ನೀಡಲಾಯಿತು ಎಂಬ ಪ್ರಶ್ನೆ ಹಲವರಲ್ಲಿ ಉದ್ಭವಿಸಿದೆ.

## ವಿದ್ಯಾರ್ಥಿಗಳು ಶಿಸ್ತು, ಸಂಯಮ, ನಾಯಕತ್ವ, ದೇಶಭಕ್ತಿ ಮೈಗೂಡಿಸಿಕೊಳ್ಳಬೇಕು: ಡಾ. ಅರುಣ ಹೂಲಿ

**ಬಾಗಲಕೋಟೆ:** ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಂಯಮ, ನಾಯಕತ್ವ, ಮತ್ತು ದೇಶಭಕಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಅರುಣ ಹೂಲಿ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 2024–25 ನೇ ಕಾಲೇಜು ಸಂಸತ್ತು ಉದ್ಘಾಟಿಸಿ ಮಾತನಾಡಿದರು.

ಯುವ ಧ್ವನಿಗಳು ರಾಷ್ಟ್ರದ ಪರಿವರ್ತನೆಗಾಗಿ ತೊಡಗಿಸಿಕೊಳ್ಳಬೇಕು, ಈ ಯುವ ಸಂಸತ್ತುಗಳು ಪ್ರಜಾಪ್ರಭುತ್ವದ ಬೇರುಗಳನ್ನು ಬಲಪಡಿಸುವ ಗುರಿಯನ್ನು ಹೊಂದಿವೆ, ಶಿಸ್ತು, ಇತರರ ದೃಷ್ಟಿಕೋನದ ಸಹಿಷ್ಣುತೆಯ ಆರೋಗ್ಯಕರವಾದ ಅಭ್ಯಾಸಗಳನ್ನು



ಬೆಳೆಸಿಕೊಂಡು ಮತ್ತು ಸಂಸತ್ತಿನ ಅಭ್ಯಾಸಗಳು ಮತ್ತು ಕಾರ್ಯವಿಧಾನಗಳ ಬಗ್ಗೆ ತಿಳಿದುಕೊಳ್ಳಬೇಕು, ಇದು ಯುವಕರಲ್ಲಿ ನಾಯಕತ್ವದ ಗುಣಗಳನ್ನು ಉತ್ತೇಜಿಸುತ್ತದೆ ಮತ್ತು ಅವರ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಮತ್ತು ಈ ಪ್ರಕ್ರಿಯೆಯಲ್ಲಿ, ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಅನುವು ಮಾಡಿಕೊಡುತ್ತದೆ ಎಂದರು.

ಇದೇ ಸಂಧರ್ಭದಲ್ಲಿ ನೂತನ ಕಾಲೇಜು ಸಂಸತ್ತ ಮಂಡಳಿಯ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು. ಪ್ರಧಾನ ಕಾರ್ಯದರ್ಶಿಗಳಾಗಿ ಸೃಷ್ಟಿ ತೋಟದ,ಪೈಜಾನನಾಲಬಂದ.ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ರಜಿಜಿತಾ ನವಲಿ, ಭಾಗ್ಯಗಂಗಶೆಟ್ಟಿ.ಕ್ರಿಡಾಕಾರ್ಯದರ್ಶಿಗಳಾಗಿ ಕಾರ್ತಿಕ ವಸ್ತ್ರದ , ತೃಪ್ತಿ ಬೋಡಕೆ.ಸಾಹಿತ್ಯ ಪುರವಣಿ ಕಾರ್ಯದರ್ಶಿಗಳಾಗಿ ಅಂಬಿಕಾ ಅವಟೆ. ಸರ್ವಮಂಗಳಾ ಎರವಿನತಲಿಮಠ. ತರಗತಿಗಳ ಪ್ರತಿನಿಧಿಗಳಾಗಿ ಪೂರ್ವಿ ಹಿರೇಮಠ. ಸಂಜಯ ಸಾವಂತ, ರಿಶಿಕೇಶ .ಶ್ರೀಮಂತ ಸಜ್ಜನ ಆಯ್ಕೆಯಾದರು. ಶ್ವೇತಾ ಸಜ್ಜನ ನಿರೂಪಿಸಿದರು ಪ್ರಾಧ್ಯಾಪಕಿ ಡಾ.ವಿ–ಜಯಲಕ್ಷ್ಮಿ ಪಾಟೀಲ ಸ್ವಾಗತಿಸಿದರು. ಸಹ ಪ್ರಾಧ್ಯಾಪಕಿ ಡಾ.ಶಮಶಾದ ಅಂಕಲಗಿ ವಂದಿಸಿದರು.ವೇದಿಕೆಯಮೇಲೆಪ್ರಾಧ್ಯಾಪಕ ಡಾ.ರವಿ.ಕೋಟೆಣ್ಣವರ. ಉಪನ್ಯಾಸಕ ಡಾ ವಿನೋದ.ಕೆ ಉಪಸ್ಥಿತರಿದ್ದರು.

# ಶಿವಬೋಧರಂಗ ಪದವಿ ಪೂರ್ವ ಕಾಲೇಜಿನಲ್ಲಿ ಯುವ ಸಂಸತ್ ಅಣುಕು ಸ್ಪರ್ಧೆ



**ಮೂಡಲಗಿ :** ಮೂಡಲಗಿ ಶಿಕ್ಷಣ ಸಂಸ್ಥೆಯಶ್ರೀ ಶಿವಭೋದರಂಗ ಪದವಿ ಪೂರ್ವ ಮಹವಿದ್ಯಾಲಯ ಮೂಡಲಗಿಯಅಡಿಯಲ್ಲಿಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಮಟ್ಟದ ಯುವ ಸಂಸತ್ ಅಣುಕು ಸ್ಪರ್ಧೆ–2024 ಜರುಗಿತು,

ಮುಖ್ಯ ಅತಿಥಿಯಾಗಿ ಚಿಕ್ಕೋಡಿಯ ಪ.ಪೂ.ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪಿ.ಆಯ್. ಭಂಡಾರಿ ಮಕ್ಕಳಿಗೆ ಸಂಸತ್ತಿನ ಬಗ್ಗೆ ಮಾಹಿತಿ ಹಾಗೂ ಸಭಾಪತಿಗಳ ಪಾತ್ರ ನಿಷ್ಪಕ್ಷವಾದಕಾರ್ಯ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಪಾತ್ರ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರ ಆಡಳಿತ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವ ಕಾರ್ಯಕ್ರಮವಾಗಿದೆ ಎಂದು ಹೇಳಿದರು

ಸಂಪನ್ಮೂಲ ವ್ಯಕ್ತಿ ಎಮ್.ಜಿ.ದೇವಡಿ ಮಾತನಾಡಿ, 12 ನೇ ಶತಮಾನದ ಅನುಭವ ಮಂಟಪದಲ್ಲಿ ಪ್ರಜೆಗಳ ಬಗ್ಗೆ ಚರ್ಚಿಸಲಾಗುತ್ತಿತ್ತು ಅದೇ ರೀತಿಯಲ್ಲಿ ಸಂಸತ್ತು ಎಂಬುದು ಪ್ರಜೆಗಳ ಕುಂದು ಕೊರತೆಗಳ ಬಗ್ಗೆ ಚರ್ಚೆ ಮತ್ತು ಸಮಲೋಚನೆ ಮಡುವ ದೇವಾಲಯವಾಗಿದೆ ಮತದ ಉಪಯೋಗ,ಅಮೂಲ್ಯವಾದ ಮತದ ಬಳಕೆ, ಪ್ರಜೆಗಳು ಮತವನ್ನು ಆಮೀಷಕ್ಕೆ ಮಾರಿಕೋಳ್ಳಬಾರದು ಎಂದು ಹೇಳಿದರು.

ಇನ್ನೊಬ್ಬರು ಸಂಪನ್ಮೂಲ ವ್ಯಕ್ತಿ ಕೆ.ಜೆ.ಮಾಲಗಾಂವೆ ಕಾರ್ಯಕ್ರಮದ ಅಧ್ಯಕ್ಷ ವ್ಹಿ.ಆರ್.ಸೋನವಾಲ್ಕರ ಮಾತನಾಡಿದರು,ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಎ.ಆಯ್. ಸತರಡ್ಡಿ, ಹಾಗೂ ಪಧಾದಿಕಾರಿಗಳಾದ ಜೆ.ಎನ್.ಸವದತ್ತಿ, ಎನ್.ಎಸ್.ಕುರುಬರ, ಎಚ್.ಎಮ್. ಹತ್ತರಕಿ ಉಪಸ್ಥಿತರಿದ್ದರು,ಪ್ರಾಚಾರ್ಯಎಮ್. ಎಸ್.ಪಾಟೀಲ ಸ್ವಾಗತಿಸಿದರು, ಉಪನ್ಯಾಸಕ ಎಚ್.ಡಿ.ಚಂದರಗಿ ನಿರೋಪಿಸಿದರು ಉಪನ್ಯಾಸಕ ಬಿ.ಜಿ.ಗಡಾದ ಉಪನ್ಯಾಸಕರು ವಂದಿಸಿದರು.

# ಚನ್ನಗಿರೇಶ್ವರ ಸಹಕಾರಿ ಸಂಘಕ್ಕೆ 41.89 ಲಕ್ಷ ರೂ.ಲಾಭ



**ಮಹಾಲಿಂಗಪುರ :** ಪಟ್ಟಣದ ಚನ್ನಗಿರೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2023–24ನೇ ಸಾಲಿಗೆ 41.89 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಚನ್ನಯ್ಯ ಚಟ್ಟಿಮಠ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಸಂಘದ 13ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. 2024ರ ಮಾರ್ಚ್ 31 ರವರೆಗೆ ಸಂಘವು 1.03 ಕೋಟಿ ರೂ. ಶೇರು ಬಂಡವಾಳ ಹೊಂದಿದೆ. ಠೇವು ರೂಪದಲ್ಲಿ ಬಾಲ ಸುರಕ್ಷಾ ಠೇವು 2.71 ಕೋಟಿ ರೂ., ರಿಕರಿಂಗ್ ಡಿಪಾಸಿಟ್ 23.39 ಲಕ್ಷ ರೂ., ಚನ್ನಗಿರೇಶ್ವರ ಕ್ಯಾಶ್ ಸರ್ಟಿಫಿಕೇಟ್ ಠೇವು 5.62 ಕೋಟಿ ರೂ., ಮುದ್ದತ ಠೇವು 7.87 ಕೋಟಿ ರೂ., ಪಿಗ್ಮಿ ಠೇವು 90 ಲಕ್ಷ ರೂ. ಹೊಂದಿದೆ ಎಂದರು.

ಸಹಕಾರಿಯು 100ಕ್ಕೂ ಹೆಚ್ಚು ಮಹಿಳಾ ಸ್ವ–ಸಹಾಯ ಸಂಘಗಳಿಗೆ ಸಾಲ ವಿತರಿಸಿ ಮಹಿಳಾ ಕ್ಷೇತ್ರದಲ್ಲಿಯೂ ಆರ್ಥಿಕ ಸಬಲತೆ ನೀಡಿದ್ದೇವೆ. ಸದಸ್ಯರಿಗೆ ಅನುಕೂಲವಾಗಲು ಸಂಪೂರ್ಣ ಗಣಕೀಕೃತ, ಇ–ಸ್ಟ್ಯಾಂಪಿಂಗ್ ವ್ಯವಸ್ಥೆ, ಖುಷಿ ಮೈಕ್ರೋಸಾಲ, ವಾಹನ ಸಾಲ, ಮುದ್ದತ ಠೇವು ಸಾಲ ಸೇರಿದಂತೆ ವಿವಿಧ ಸೇವೆಗಳನ್ನು ಪೂರೈಸಲಾಗುತ್ತಿದೆ ಎಂದರು. ಉಪಾಧ್ಯಕ್ಷ ಪ್ರಕಾಶ ಬಾಡನವರ, ನಿರ್ದೇಶಕರಾದ ಪ್ರಕಾಶ ಭಾವಿಕಟ್ಟಿ, ರವಿ ಬಾರಕೋಲ, ಬಸವರಾಜ ಜಮಖಂಡಿ, ಮಹಾಂತೇಶ ಮನ್ನಯ್ಯನವರಮಠ, ಆನಂದ ಬೆಣಗಿ, ಮಹಾಲಿಮಗ ಕೊಣ್ಣೂರ, ಬಸವರಾಜ ಕಬ್ಬೂರ, ಸುಕನ್ಯಾ ಕಬ್ಬೂರ, ಮುಖ್ಯ ವ್ಯವಸ್ಥಾಪಕ ಮಹಾಲಿಂಗಯ್ಯ ಚಟ್ಟಿಮಠ, ಸಹ ವ್ಯವಸ್ಥಾಪಕ ಅಶೋಕ ಜಮಖಂಡಿ, ಸಿಬ್ಬಂದಿ ಸಾವಿತ್ರಿ ಗುನಾರಿ, ಬಸವರಾಜ ಮಠಪತಿ, ಈರಯ್ಯ ಹಿರೇಮಠ, ಪೂಜಾ ಜಮಖಂಡಿ ಸೇರಿದಂತೆ ಹಲವರು ಇದ್ದರು.

# ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



**ಬಾಗಲಕೋಟೆ :** ಅಂತರಾಷ್ಟ್ರೀಯ ಲಯನ್ಸ್ ಕ್ಲಬ್ ಬಾಗಲಕೋಟ ಜಿಲ್ಲಾ ಘಟಕದ ವತಿಯಿಂದ ಹಸಿರು ಬೆಳೆಸಿ, ಉಸಿರು ಉಳಿಸಿ ಎಂಬ ಧ್ಯೇಯ ನಾಮದಡಿಯಲ್ಲಿ ಜಿಲ್ಲೆಯ ಬೀಳಗಿ ತಾಲೂಕಿನ ಬಾಡಗಂಡಿಯ ಎಸ್. ಆರ್. ಪಾಟೀಲ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಪ್ರಕೃತಿ ಸಂರಕ್ಷಣೆ ಮತ್ತು ಪರಿಸರ ಸಮತೋಲನ ಕಾಪಾಡುವ ಮುಂದುವ–ರಿದ ಭಾಗವಾಗಿ ಇಂದು ಸಸಿ ನೆಡುವ ಕಾರ್ಯಕ್ರಮಕ್ಕೆ ಮಾಜಿ ಸಚಿವರಾದ ಎಸ್ ಆರ್ ಪಾಟೀಲ ಅವರು ಚಾಲನೆನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಲಯನ್ಸ್ ಕ್ಲಬ್ ಅಧ್ಯಕ್ಷರಾಧಿಯಾಗಿ ಯಾವತ್ತೂ ಸರ್ವಸದಸ್ಯರು ಹಾಗೂ ಶಿಕ್ಷಣ ಪ್ರತಿಷ್ಠಾನದ ಕಾರ್ಯದರ್ಶಿಗಳು ಸೇ–ರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅಪೌಷ್ಟಿಕತೆ ತೊಲಗಿಸಿ



**ಬಾಗಲಕೋಟೆ :** ಅಪೌಷ್ಟಿಕತೆಯನ್ನು ಹೋಗಲಾಡಿಸಲು ಕೇಂದ್ರ ಹಾಗೂ ರಾಜ್ಯ ಸರಕಾರ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಮಕ್ಕಳಿಗೆ ಗರ್ಭಿಣಿಯರಿಗೆ ಬಾಣಂತಿಯ–ರಿಗೆ ಪೌಷ್ಟಿಕತೆಯನ್ನು ಹೆಚ್ಚಿಸುವ ಮಾತ್ರೆ ಹಾಗೂ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ಹಂಚಿಕೆ ಮಾಡುತ್ತಿರುವುದು ಶ್ಲಾಘನೀಯ. ಪ್ರಯುಕ್ತ ಸಪ್ಟೆಂಬರ್ ಮಾಹೆಯಲ್ಲಿ "ರಾಷ್ಟ್ರೀಯ ಪೋಷಣ್" ಮಾಸಾಚರಣೆಯನ್ನು ಮಾಡಲಾಗುತ್ತದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ದಸ್ತಗಿರ್ ಮುಲ್ಲಾ,

ಬಾದಾಮಿ ಹೂಲಗೇರಿ ವಲಯದ ವಾಲ್ಮೀಕಿ ಭವನದಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಪೋಷಣ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವಲ್ಲಿ ತಾಯಂದಿರ ಪಾತ್ರ ಮಹತ್ವದ್ದು ಎಂದು ಹಿರಿಯ ಮೇಲ್ವಿಚಾರಕಿ ಭುವನೇಶ್ವರಿ ಬರಹಣಾಪುರ ಹೇಳಿದರು.

ಇನ್ನೋರ್ವ ಹಿರಿಯ ಮೇಲ್ವಿಚಾರಕಿ ಶಶಿಕಲಾ ಚನ್ನಪ್ಪಗೌಡರ್ ಮಾತನಾಡಿ ಬಾಣಂತಿ–ಯರು ಗರ್ಭಿಣಿಯರು ಸಮತೋಲಿತ ಆಹಾರ ಸೇವಿಸಬೇಕೆಂದು ಕಿವಿ ಮಾತು ಹೇಳಿದರು.

ಚೊಚ್ಚಲ ಗರ್ಭಿಣಿಯರಿಗೆ ಸೀಮಂತ, ತೊಟ್ಟಿಲು ಕಾರ್ಯಕ್ರಮ, ಮಕ್ಕಳಿಗೆ ಅನ್ನಪ್ರಾಶನ ಹಾಗೂ ಸಸಿ ನೆಡುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಪಂ ಸದಸ್ಯ ಸಂಜುರೆಡ್ಡಿ ಅಳ್ಳಿ ವಹಿಸಿದ್ದರು.

ವಲಯ ಮೇಲ್ವಿಚಾರಕಿ ರುಕ್ಮಿಣಿ ಬಡಿಗೇರ್ ಸ್ವಾಗತಿಸಿದರು. ದೀಪಾ ಕಮತೆ,ಎಸ್ ಬಿ ಕಾ–ರಿ,ಸುಮಿತ್ರ,ಪದ್ಮ ಕಮತರ್,ಸುರೇಶ್ ಹದ್ಲಿ, ಬರಮಣ್ಣ,ಅಂಗನವಾಡಿ ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು, ಬಾಣಂತಿಯರು ಹಾಗೂ ತಾಯಂದಿರು ಭಾಗವಹಿಸಿದ್ದರು. ವೀಣಾ ಜೋಶಿ ಕಾರ್ಯಕ್ರಮ ನಿರೂಪಿಸಿದರು ಕೊನೆಯಲ್ಲಿ ಗಂಗಮ್ಮ ಉದಪುಡಿ ವಂದಿಸಿದರು.

# ಸ್ವಚ್ಛತಾ ಹೀ ಸೇವಾ 2024 ಶೀರ್ಷಿಕೆಯನ್ನು ಅಕ್ಷರ ಮೂಲಕ ಜೋಡಿಸಿದ ವಿದ್ಯಾರ್ಥಿಗಳು



**ಮುಧೋಳ :** ನಗರಸಭೆ ಸಹಯೋಗದೊಂದಿಗೆ ಆರ್ ಎಂ ಜಿ ಕಾಲೇಜಿನ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಸ್ವಚ್ಛತಾ ಹೀ ಸೇವಾ 2024 ಎಂಬ ಶೀರ್ಷಿಕೆಯನ್ನು ಅಕ್ಷರ ಮೂಲಕ ಜೋಡಿಸಿದರು.

ನಗರಸಭೆ ಕಿರಿಯ ಆರೋಗ್ಯ ಸಹಾಯಕರಾದ ಸುಭಾಷ್ ಕಾಂಬಳೆ ಅವರು ಸ್ವಚ್ಛತಾ ಈ ಸೇವಾ ಎಂಬ ಕಾರ್ಯಕ್ರಮವನ್ನು ನಡೆಸಿ ಮಾತನಾಡಿದರು ಸ್ವಚ್ಛತೆ ಬಗ್ಗೆ ಸಾರ್ವಜನಿಕರು ಜಾಗ್ರತೆ ವಹಿಸಬೇಕು ಮತ್ತು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಸುಂದರವಾಗಿ ಇಟ್ಟುಕೊಳ್ಳಬೇಕು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಂತಹ ಕೆಲಸ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರ್ ಎಂ ಜಿ ಶಾಲೆಯ ಮುಖ್ಯೋಪಾಧ್ಯಾಯರಾದ ಹಿರೇಮಠ್ ಸರ್ ಗೋವಿಂದಪುರ ಮಠ ಸರ್ ಇನ್ನುಳಿದ ಶಾಲೆಯ ಗುರು ವೃಂದ ನಗರಸಭೆಯ ಕಿರಿ ಆರೋಗ್ಯ ನಿರೀಕ್ಷಕ ಸುಭಾಷ್ ಕಾಂಬಳೆ ದಾನೇಶ್ ಮಾಂಗ್ ಜಯಂವಂತ ಹಿರಲಕ್ಕಿ ವಿಠಲ್ ಮಿರ್ಜಿ ಗುರು ಮಿಶಿ ಸದಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

# ಭಗತ್‌ಸಿಂಗ್‌ರ ದೇಶಪ್ರೇಮ ಯುವಕರಿಗೆ ಪ್ರೇರಣೆ: ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ



**ವಿಜಯಪುರ :** ರಕ್ತದ ಕಣಕಣಗಳಲ್ಲಿಯೂ ರಾಷ್ಟ್ರ ಪ್ರೇಮವನ್ನು ತುಂಬಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣವನ್ನೇ ಮುಡುಪಾಗಿಟ್ಟ ಅಪ್ರತಿಮ ಹೋರಾಟಗಾರ,ಕ್ರಾಂತಿಯ ಕಿಡಿ ಭಗತ್‌ಸಿಂಗ್‌ರ ದೇಶ ಪ್ರೇಮ ಯುವಕರಿಗೆ ಪ್ರೇರಣೆ ಎಂದು ನ್ಯಾಯವಾದಿ ಸಾಹಿತಿ ಮಲ್ಲಿಕಾರ್ಜುನ ಭೃಂಗಿಮಠ ಹೇಳಿದರು

ನಗರದ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಭಾನುವಾರ ಸ್ವಾಮಿ ವಿವೇಕಾನಂದ ಯುವ ಬ್ರಿಗೇಡ್ ಮತ್ತು ಭಾರತ ವೇದಿಕೆ ಚಾರಿಟೇಬಲ್ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡ ದೇಶಪ್ರೇಮಿ ಭಗತ್‌ಸಿಂಗರ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಭಗತ್ ಸಿಂಗ್‌ರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು

ಮುಖ್ಯ ಅತಿಥಿ ಸಾಹಿತಿ ಪ್ರೊ, ಎ.ಎಚ್. ಕೊಳಮಲಿ ಸ್ವಾತಂತ್ರ ಹೋರಾಟಗಾರ ಭಗತ್ ಸಿಂಗನ ಕುರಿತು ವಿಶೇಷ ಉಪನ್ಯಾಸವನ್ನು ನೀಡಿ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡುವುದೇ ಭಗತ್‌ಸಿಂಗರ ಗುರಿ ಮತ್ತು ಛಲವಾಗಿತ್ತು. ಬಾಲ್ಯದಿಂದಲೂ ದೇಶಪ್ರೇಮವನ್ನು ಒಳಗೊಂಡಿದ್ದನು. ದುಷ್ಟಬ್ರಿಟಿಷರನ್ನು ಹೊಡೆದು ಓಡಿಸುವುದೇ ನನ್ನ ಬಲವಾದ ಛಲ ಎಂದು ಹೋರಾಡಿ ಕೇವಲ 24 ವರ್ಷದಲ್ಲಿ ದೇಶಕ್ಕಾಗಿ ಪ್ರಾಣವನ್ನು ತ್ಯಾಗ ಮಾಡಿದ ಅಪ್ಪಟ ದೇಶಪ್ರೇಮಿ ಭಗತ್‌ಸಿಂಗರ ದೇಶ ಅಭಿಮಾನ ಮೆಚ್ಚುವಂತದ್ದು.

ಇಂದಿನ ಯುವಕರು ದೇಶಕ್ಕಾಗಿ ದುಡಿಯಬೇಕು. ದೇಶಕ್ಕಾಗಿ ಮಡಿಯಬೇಕು. ತಾಯಿ ಹಾಗೂ ತಾಯಿ ನಾಡಿಗಾಗಿ ಹೋರಾಡುವ ಯುವ ಪಡೆಯ ಅವಶ್ಯಕತೆ ಇದೆ ಎಂದು ಹೇಳಿದರು

ಫೌಂಡೇಶನದ ಅಧ್ಯಕ್ಷ ಸುನೀಲ ಜೈನಾಪುರ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದ ಭವಿಷ್ಯ ಯುವಕರ ಕೈಯಲ್ಲಿದೆ. ದೇಶ ಕಟ್ಟುವಲ್ಲಿ ಯುವಕರು ಕಂಕಣ ಬದ್ಧರಾಗಿ ನಿಲ್ಲಬೇಕು. ಇಂದಿನ ಯುವಕರಲ್ಲಿ ಭಗತ್‌ಸಿಂಗರ ದೇಶಾಭಿಮಾನ ಬೆಳೆಯಬೇಕೆಂದರು. ಗುರು ಗಚ್ಚಿನಮಠ, ಸಂಗಮೇಶ ಜಾಧವ, ಶಂಕರ ಹಾಲಳ್ಳಿ, ಸಂತೋಷ ಹೆಗಡೆ, ಅಮಿತ ನಾಯ್ಕೋಡಿ, ಸಂಜು ಹೂಗಾರ, ಕಿರಣ ಕೆಂಗನಗುತ್ತಿ, ಅವಿನಾಶ ಮೆಹಿದ್ರಕರ್, ವಿಜಯ ಮುರಗಾನೂರ, ಸುಧೀರ, ಪ್ರಸಾದ್ ಪಾಟೀಲ, ಪ್ರೇಮ ನಿಡೋಣಿ, ಯೋಗೇಶ ಹೊನಕೇರಿ ಮುಂತಾದವರು ಉಪಸ್ಥಿತರಿದ್ದರು.

# ಪೌರ ಕಾರ್ಮಿಕರು ದುಶ್ಚಟಗಳಿಂದ ದೂರವಿರಬೇಕು



**ರಬಕವಿ–ಬನಹಟ್ಟಿ :** ಕೋವಿಡ್ ಸಮಯದಲ್ಲಿ ಪೌರ ಕಾರ್ಮಿಕರು ಸಲ್ಲಿಸಿದ ಸೇವೆ ಶ್ಲಾಘನೀಯವಾದುದು. ಪೌರ ಕಾರ್ಮಿಕರು ದುಶ್ಚಟಗಳಿಂದ ದೂರವಿರುವುದರ ಜೊತೆಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವತ್ತ ಗಮನ ನೀಡಬೇಕು. ಪೌರ ಕಾರ್ಮಿಕರು ತಾವು ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ಮುತುವರ್ಜಿ ವಹಿಸಬೇಕು ಎಂದು ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ಅವರು ಸೋಮವಾರ ಇಲ್ಲಿನ ನಗರಸಭೆಯ ಆಶ್ರಯದಲ್ಲಿ ಪೌರ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪೌರ ಕಾರ್ಮಿಕರಿಗಾಗಿ ಸರ್ಕಾರ ಅನೇಕ ಮಹತ್ವದ ಯೋಜನೆಗಳನ್ನು ರೂಪಿಸಿದ್ದು, ಅವುಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಗದೀಶ ಈಟಿ ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ ಮಾತನಾಡಿ, ನಗರಗಳ ಸ್ವಚ್ಛತೆಯಲ್ಲಿ ಸಾರ್ವಜನಿಕರು ಕೂಡಾ ಪೌರ ಕಾರ್ಮಿಕರಿಗೆ ಸಹಕಾರ ನೀಡಬೇಕು. ಪೌರ ಕಾರ್ಮಿಕರು ಮಾಡುವ ಕಾರ್ಯ ಶ್ರೇಷ್ಠವಾದುದು. ಅವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ವೇದಿಕೆಯ ಮೇಲೆ ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಸ್ಥಾಯಿ ಸಮಿತಿ ಕಾರ್ಯಾಧ್ಯಕ್ಷ ಅರುಣ ಬುದ್ನಿ ಇದ್ದರು. ನಗರಸಭೆಯ ಸದಸ್ಯ ಚಿದಾನಂದ ಹೊರಟ್ಟಿ, ಸದಸ್ಯೆ ಗೌರಿಮಿಳ್ಳಿ, ಪೌರ ಕಾರ್ಮಿಕ ಬಸವರಾಜ ಗಾಡಿವಡ್ಡರ, ಹಿರಿಯ ಆರೋಗ್ಯ ನಿರೀಕ್ಷಕಿ ಶೋಭಾ ಹೊಸಮನಿ, ಸಂಗೀತಾ ಕೋಳಿ ಮಾತನಾಡಿದರು.

ಯುನೂಸ್ ಚೌಗಲಾ, ಪ್ರಭಾಕರ ಮೋಳೇದ, ಯಲ್ಲಪ್ಪ ಕಟಗಿ, ಬಸವರಾಜ ಗುಡೋಡಗಿ, ದುರ್ಗವ್ವ ಹರಿಜನ, ಮುಖೇಶ ಬನಹಟ್ಟಿ, ವಿ.ಟಿ. ಪವಾರ, ಶಿವಪುತ್ರ ಮೂಡಲಗಿ, ಮುತ್ತಣ್ಣ ಚೌಡಕಿ, ಎಂ. ಮೊಕಾಶಿ, ಭೀಮು ಬಾಡಗಿ, ಬಿ. ಎಸ್. ಗಡಾದ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಸಂಘದ ಅಭಿವೃದ್ಧಿಯಿಂದ ರೈತರ ಅಭಿವೃದ್ಧಿ



**ರಬಕವಿ–ಬನಹಟ್ಟಿ :** ರೈತರ ಅಭಿವೃದ್ಧಿಗಾಗಿ ಸಂಘ ಸದಾ ಕಾರ್ಯ ನಿರ್ವಹಿಸುತ್ತಿದ್ದು, ಅದರ ಬೆಳವಣಿಗೆಗೆ ಪ್ರತಿಯೊಬ್ಬ ರೈತರ ಸಹಕಾರ ಮುಖ್ಯವಾಗಿದೆ ಎಂದು ಜಗದಾಳದ ಸ್ವರ್ಣಭೂಮಿ ಸಾವಯವ ರೈತರ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಸದಾಶಿವ ಬಂಗಿ ಹೇಳಿದರು.

ಅವರು ಜಗದಾಳದಲ್ಲಿ ಸ್ವರ್ಣಭೂಮಿ ಸಾವಯವ ರೈತರ ಉತ್ಪಾದಕ ಕಂಪನಿ ಇದರ ಸರ್ವ ಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘವು ನಮಗಾಗಿ ಕೆಲಸ ಮಾಡುತ್ತಿದ್ದು, ಸಂಘದ ಅಭಿವೃದ್ಧಿಯಲ್ಲಿಯೂ ಕೂಡಾ ನಾವೆಲ್ಲ ಕೈ ಜೋಡಿಸೋಣ ಎಂದರು.

ಈ ಸಂದರ್ಭದಲ್ಲಿ ಕಂಪನಿಯ ಮುಖ್ಯ ಕಾರ್ಯನಿರ್ವಾಹಕರಾದ ಶಿವು ನಾಯಕ ವರದಿ ವಾಚನ ಮಾಡಿದರು.

ಸಮಾರಂಭದಲ್ಲಿ ಉಪಾಧ್ಯಕ್ಷ ಮಹಾಂತೇಶ ಜಾಲಿಕಟ್ಟಿ, ನಿರ್ದೇಶಕರಾದ ಕಾಡಪ್ಪ ಹೊಸೂರ, ದಾನಪ್ಪ ಆಸಂಗಿ, ಅಡಿವೆಪ್ಪ ಕಿತ್ತೂರ, ಪ್ರಕಾಶ ತೇಲಿ, ಪ್ರಭು ಮೇಲಗಿರಿ, ಶ್ರೀಶೈಲ ರಂಗಾಪೂರ, ಅನಸೂಯಾ ಕಾಂತಿ, ಸುವರ್ಣಾ ಬಂಗಿ, ಜಗದೀಶ ಗಂಗಶೆಟ್ಟಿ, ಸಿದ್ದಲಿಂಗ ಸ್ವಾಮಿ ಸೇರಿದಂತೆ ಜಗದಾಳ, ನಾವಲಗಿ, ಹೊಸೂರ, ಚಿಮ್ಮಡ, ಬನಹಟ್ಟಿ ಹಾಗೂ ಯಲ್ಲಟ್ಟಿ ಗ್ರಾಮದ ರೈತರು ಭಾಗವಹಿಸಿದ್ದರು.

# ಹಳಿಂಗಳಿ ಕಮರಿ ಮಠದ ಶರಣಬಸವ ದೇವರಿಗೆ ಆರು ಸ್ವರ್ಣ ಪದಕ



**ರಬಕವಿ–ಬನಹಟ್ಟಿ :** ಗ್ರಾಮೀಣ ಪ್ರದೇಶದ ಪ್ರತಿಭೆ ಬಾಲ ಬ್ರಹ್ಮಚಾರಿತ್ವ ಸ್ವೀಕರಿಸಿ ಸಂತನಾಗಬೇಕೆಂದು ಸಾಧನೆ ಮಾಡಲು ಮುಂದಾದ ತಾಲೂಕಿನ ಹಳಿಂಗಳಿ ಶ್ರೀ ಶರಣಬಸವ ಶ್ರೀಗಳ ಕಮರಿ ಮಠದ ಉತ್ತರಾಧಿಕಾರಿ ಎಂದು ನೇಮಕಗೊಂಡ ಶ್ರೀ ಶರಣಬಸವ ದೇವರು ಪ್ರಸಕ್ತ ವರ್ಷದ ಎಂ. ಎ. ಪರೀಕ್ಷೆಯಲ್ಲಿ ಒಟ್ಟು ಆರು ಸ್ವರ್ಣ ಪದಕ ಪಡೆದು ಸಾಧನೆ ಮಾಡಿದ್ದಾರೆ.

ಕಳೆದ ವಾರವಷ್ಟೇ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಶ್ರೀ ಶರಣ ಬಸವ ದೇವರು ಈ ಪದಕಗಳನ್ನು ಸ್ವೀಕರಿಸಿದರು. ಎಂ. ಎ. ತತ್ವಶಾಸ್ತ್ರ ವಿಭಾಗದಲ್ಲಿ ಆಳವಾಗಿ ಅಧ್ಯಯನಗೈದು ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಮತ್ತು ಧಾರವಾಡ ವಿಶ್ವವಿದ್ಯಾಲಯದ ಕ ್ ು ಲ ಪ ್ ತಿ ಗ ್ ಳ ್ ು , ಕುಲಸಚಿವರಿಂದ ಪೂಜ್ಯ ಶ್ರೀ ಶರಣ ಬಸವ ದೇವರು ಆರು ಸ್ವರ್ಣ ಪದಕಗಳನ್ನು ಪಡೆದಿರುವುದು ಹಳಿಂಗಳಿ ಗ್ರಾಮಕ್ಕೆ ಹೆಮ್ಮೆ ತರುವ ಸಂಗತಿ ಎಂದು ಶ್ರೀ ಮಠದ ಶರಣಬಸವ ಶ್ರೀಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಅವರು ಭಾರತೀಯ ತತ್ವಶಾಸ್ತ್ರ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರ ಎರಡು ಸ್ವರ್ಣ, ಆಗಮಗಳಲ್ಲಿ ವೀರಶೈವ ತಾತ್ವಿಕತೆ ಎರಡು ಸ್ವರ್ಣ, ಇನ್ನು ವಚನಗಳಲ್ಲಿ ವೀರಶೈವದ ತಾತ್ವಿಕತೆಗೆ ಎರಡು ಸ್ವರ್ಣ ಹೀಗೆ ಒಟ್ಟು ಆರು ಸ್ವರ್ಣ ಪದಕಗಳನ್ನು ಶ್ರೀಗಳು ಪಡೆದುಕೊಂಡಿದ್ದಾರೆ. ಇದರಿಂದ ಗ್ರಾಮದಲ್ಲಿ ಸಂತಸ ಹಾಗೂ ಸಂಭ್ರಮದ ವಾತಾವರಣ ನಿರ್ಮಾಣವಾಗಿದ್ದು ಎಲ್ಲೆಡೆ ಅವರನ್ನು ಅಭಿನಂದಿಸಲಾಗುತ್ತಿದೆ.

# ಕೆ.ಎಂ.ಎಫ್. ನ ಕರದಂಟು, ಪೇಡಾ ಮೈಸೂರು ದಸರಾದಲ್ಲಿ ಮಾರಾಟ



**ರಬಕವಿ–ಬನಹಟ್ಟಿ :** ವಿಶ್ವದ ಗಮನ ಸೆಳೆಯುವ ಮೈಸೂರು ದಸರಾದಲ್ಲಿ ಈಗಾಗಲೇ ಮಾರಾಟವಾಗಲು ಪ್ರಾರಂಭಿಸಿರುವ ನಂದಿನಿ ಧಾರವಾಡ ಫೇಡಾ, ಮೈಸೂರ ಪಾಕ್ ಜೊತೆಗೆ ರಬಕವಿ – ಬನಹಟ್ಟಿ ಸಮೀಪದ ಆಸಂಗಿಯ ಕೆ.ಎಂ.ಎಫ್. ನ ಡೆಂಪೊ ಡೇರಿಯಲ್ಲಿ ಕರದಂಟು ಉತ್ಪಾದನೆ ಮಾಡಿ ಮಾರಾಟವಾಗಲು ಪ್ರಾರಂಭಿಸಿದ್ದು ಹೆಮ್ಮೆಯ ವಿಷಯ.

ದೇಶ ವಿದೇಶಗಳಿಗೆ ಇಲ್ಲಿನ ಸೀರೆಗಳು ರಪ್ತಾಗುತ್ತಿದ್ದರೆ, ಮತ್ತೊಂದು ಹೆಜ್ಜೆ ಮುಂದಿಟ್ಟಿರುವ ಸರ್ಕಾರಿ ಸ್ವಾಮ್ಯದಲ್ಲಿರುವ ನಂದಿನಿ ಹೆಸರಿನ ಕೆಎಂಎಫ್ಡಿಎಲ್ನ ಉತ್ತಮ ಗುಣಮಟ್ಟದ ಹಾಲಿನ ಉತ್ಪನ್ನಗಳನ್ನು ನಿತ್ಯ ರಾಜ್ಯ ವ್ಯಾಪಿ ಹಾಗು ನೆರೆಯ ರಾಜ್ಯಗಳಿಗೂ ಉತ್ಪಾದಿಸಿ ನಿತ್ಯ ರಫ್ತು ಮಾಡುತ್ತಿದೆ. ಈ ಭಾಗ ಕಬ್ಬು ಬೆಳೆಗೆ ಹೆಸರಾಗಿದೆ. ಅಲ್ಲದೆ ಕೃಷ್ಣೆ, ಘಟಪ್ರಭೆಯಂತ ನದಿಪಾತ್ರಗಳ ಪ್ರದೇಶದಲ್ಲಿ ಎಮ್ಮೆ ಸಾಕಾಣಿಕೆ ಮಾಡಿ

**'ಸಂಸ್ಥೆಯ ಆರ್ಥಿಕ ಅಭಿವೃದ್ಧಿ ಜೊತೆಗೆ ಕಾರ್ಮಿಕರಿಗೆ ಮತ್ತಷ್ಟು ಉತ್ತೇಜನ ನೀಡುವುದರೊಂದಿಗೆ ಈ ಭಾಗದ ರೈತರ ಏಳ್ಗೆಗೆ ಇಂತಹ ಕಾರ್ಯಕ್ರಮಗಳು ಪೂರಕವಾಗಲಿವೆ'.**

**–ಬಿ. ಎಸ್. ಸಿದ್ಧೇಗೌಡ**

ಹೈನುಗಾರಿಕೆಯಲ್ಲಿ ಅನೇಕರು ತೊಡಗಿಸಿಕೊಂಡಿದ್ದಾರೆ.

ಗುಣಮಟ್ಟದ ಮೇವು ದೊರಯುವದರಿಂದ ಎಮ್ಮೆಯ ಹಾಲು ತುಂಬಾ ಗುಣಮಟ್ಟ ಮತ್ತು ಶಕ್ತಿವರ್ಧಕವಾಗಿರುತ್ತದೆ. ಇದರಿಂದ ಪೇಡಾ ಮಾಡಲು ಖವಾ ತುಂಬಾ ಗುಣಮಟ್ಟದಲ್ಲಿ ತಯಾರಾಗುತ್ತದೆ. ಆದ್ದರಿಂದ ರುಚಿಕರವಾದ ಪೇಡಾ ತಯಾರಾಗಲು ಸಾಧ್ಯವಾಗಿದೆ.

ಕರದಂಟು ವಿಶೇಷ: ಮೈಸೂರು ದಸರಾ ಮಹೋತ್ಸವಕ್ಕೆ ಈ ಬಾರಿ ಗುಣಮಟ್ಟದ ಕರದಂಟು ರಫ್ತು ಮಾಡುತ್ತಿರುವದು ವಿಶೇಷವಾಗಿದ್ದು, ಹನ್ನೆರಡು ಟನ್ನಷ್ಟು ಸಿಹಿ ಉತ್ಪನ್ನಗಳು ದಸರಾ ಹಬ್ಬದ ನಿಮಿತ್ಯ ಮೈಸೂರಿಗೆ ತೆರಳಲಿದೆ.

ಕೆನೆ ಭರಿತ ಹಾಲಿನಿಂದ ಇಲ್ಲಿ ಮೈಸೂರ್ ಪಾಕ್, ಜಾಮೂನು, ಬಾದಾಮ್ ಹಾಲಿನ ಜೊತೆಗೆ ಪ್ರಥಮ ಬಾರಿಗೆ ಕೆಎಂಎಫ್ನಿಂದ ಇಲ್ಲಿನ ಘಟಕದಿಂದ ತಯಾರಾ ಗುತ್ತಿರುವ ಪ್ರೀಮಿಯಂ ಕರದಂಟು ಎಲ್ಲೆಡೆ ಬೇಡಿಕೆಗೆ ಕಾರಣವಾಗಿದೆ. ಜನರಿಗೆ ಕೈಗೆಟುವ ದರದಲ್ಲಿ ಅನೇಕ ರುಚಿಯಾದ ಹಾಲಿನ ಉತ್ಪನ್ನಗಳನ್ನು ತಯಾರಿಸಿ ರಾಜ್ಯದ ಅನೇಕ ಜಿಲ್ಲೆಗಳಿಗೆ ಸರಬರಾಜು ಮಾಡುತ್ತೇವೆ ಎನ್ನುತ್ತಾರೆ ಕೆಎಂಎಫ್ಡಿಎಲ್ನ ವ್ಯವಸ್ಥಾಪಕ ನಿರ್ದೇಶಕ ಬಿ. ಎಸ್. ಸಿದ್ಧೇಗೌಡ.

# ಸಂಗೀತೋತ್ಸವ ಕಾರ್ಯಕ್ರಮ



**ಕುಂದಗೋಳ :** ವಿಶ್ವ ವಿಖ್ಯಾತ ನಾಡಗೀರ ವಾಡೆ ಸಂಗೀತವು ಯಾವುದೇ ಕಾಲಕ್ಕೂ ಕೊನೆಯಾಗಬಾರದು ಎಂದು ರಾಜ್ಯ ಸಭಾ ಸದಸ್ಯೆ ಹಾಗೂ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾಮೂರ್ತಿ ಅವರು ಹೇಳಿದರು.
ನಾಡಗೀರ ವಾಡೆಯಲ್ಲಿ ಪ್ರತಿವರ್ಷ ಜರುಗುವ ಪುಣ್ಯ ಸಂಗೀತೋತ್ಸವ ಕಾರ್ಯಕ್ರಮದನ್ವಯ ವಿಧಿವತ್ತಾಗಿ ಸವಾಯಿ ಗಂಧರ್ವರ ಪುತ್ಥಳಿಗೆ ಪೂಜಿಸಿ, ಮಾಲಾರ್ಪಣೆ ಮಾಡಿದ ಅವರು ಮಾತನಾಡಿ ಎರಡು ವರ್ಷಗಳಿಂದ ವಾಡೆಯಲ್ಲಿ ಸಂಗೀತ ಕಚೇರಿ ನಡೆಯುತ್ತಿಲ್ಲ. ಹೀಗಾಗಬಾರದು, ಈ ಸ್ಥಳವು ನಮ್ಮ ನಾಡಿಗೆ ಹಾಗೂ ರಾಷ್ಟ್ರಕ್ಕೆ ಅತ್ಯುತ್ತಮ ಸಂಗೀತಗಾರರನ್ನು ನೀಡಿದ್ದು, ಅವರೆಲ್ಲರ ಸೇವೆ ಅವಿಸ್ಮರಣೀಯ. ಹಾಗಾಗಿ ಕುಂದಗೋಳದ ಈ ಪ್ರಸಿದ್ಧಿ ವಾಡೆಯಲ್ಲಿ ಸಂಗೀತ ಕಚೇರಿ ಜರುಗುವಂತಾಗಿ, ಸಂಗೀತಾಸಕ್ತರ ಭಾವನೆಗಳು ಮತ್ತೆ ಪುಟಿದೇಳುವಂತಾಗಲಿ ಎಂದರು. ಇದಕ್ಕೂ ಮುನ್ನ ಕುಂದಗೋಳ ಸವಾಯಿ ಗಂಧರ್ವರ ಸಭಾಭವನದಲ್ಲಿ ಜರುಗಿದ ಅಹೋರಾತ್ರಿ ಸಂಗೀತ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಿದರು.
ಈ ಸಂದರ್ಭದಲ್ಲಿ ಡಾ. ಅಶೋಕ ಹುಗ್ಗಣ್ಣವರ, ಕೆ. ಆರ್. ನಾಡಗೀರ, ಅರ್ಜುನ್ ನಾಡಗೀರ ಸೇರಿದಂತೆ ಇತರರಿದ್ದರು.

# ಕಲಘಟಗಿ: ಗ್ರಾಹಕರ ವಿಶ್ವಾಸದಿಂದ ಬ್ಯಾಂಕಿನ ಪ್ರಗತಿ



**ಕಲಘಟಗಿ :** ಸದಸ್ಯರು, ಗ್ರಾಹಕರು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸದಿಂದ ಬ್ಯಾಂಕಿನ ಪ್ರಗತಿಗೆ ಕಾರಣವಾಗಿದೆ ಎಂದು ವೈಸ್ ಚೇರಮನ್ ಜೆ.ಕೆ. ಕಡ್ಲಾಸ್ಕರ ಹೇಳಿದರು.
ಇತ್ತೀಚೆಗೆ ಪಟ್ಟಣದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿದ ದಿ ಕಲಘಟಗಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ 65ನೇ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಸಸಿಗೆ ನೀರುಣಿಸುವ ಮೂಲಕ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.
ರೈತರು, ಸಾಮಾನ್ಯ ಜನರು, ಆರ್ಥಿಕ ದುರ್ಬಲ ವರ್ಗದವರು ಹಾಗೂ ಸಣ್ಣಪುಟ್ಟ ವ್ಯಾಪಾರಸ್ಥರುಗಳಿಗೆ ಸಾಲವನ್ನು ನೀಡುವುದರೊಂದಿಗೆ ತನ್ನ ಕಾರ್ಯ ವ್ಯಾಪ್ತಿಯಲ್ಲಿನ ಎಲ್ಲ ಸಹಕಾರಿಗಳ ಶ್ರೇಯೋಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದೆ ಎಂದರು ಮತ್ತು ಬ್ಯಾಂಕಿನ ಚೇರಮನ್ನರಾದ ಎಸ್. ಎನ್. ಭರಮಗೌಡರ ಪರವಾಗಿ ವಾರ್ಷಿಕ ಮಹಾಸಭೆಗೆ ಆಗಮಿಸಿದಂತಹ ಎಲ್ಲರಿಗೂ ಶುಭಾಶಯ ಕೋರಿದರು.
ವ್ಯವಸ್ಥಾಪಕ ಗಂಗಾಧರ ಅಂಗಡಿ ಮಾತನಾಡಿ, ಬ್ಯಾಂಕ್ ಸಾಲಗಾರರು ಸಕಾಲದಲ್ಲಿ ತಮ್ಮ ಸಾಲವನ್ನು ಮರುಪಾವತಿಸಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದರೊಂದಿಗೆ ಸಹಕಾರಿ ತತ್ವದ ಘನತೆಯನ್ನು ಹೆಚ್ಚಿಸಬೇಕು ಎಂದರು.
ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿವೃತ್ತಿ ಹೊಂದಿದ ಬ್ಯಾಂಕಿನ ಮ್ಯಾನೇಜರ್ ಎ.ಎನ್. ಬಡಿಗೇರ ಅವರ ಮಾತೋಶ್ರೀ ನಾಗವ್ವ ಹಾಗೂ ಪತ್ನಿ ಗೀತಾ ಅವರನ್ನು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಸನ್ಮಾನಿಸಿ ಬಡಿಗೇರ ಅವರಿಗೆ ಬೀಳ್ಕೊಡಲಾಯಿತು.
ಸಂಗೀತ ಕಲಾವಿದರಾದ ಅಶೋಕ ಅರ್ಕಸಾಲಿ, ಮಲ್ಲಯ್ಯ ಪೂಜಾರ ಹಾಗೂ ನೂತನ ಮ್ಯಾನೇಜರ್ ಗಂಗಾಧರ ಅಂಗಡಿ ಅವರನ್ನು ಸನ್ಮಾನಿಸಲಾಯಿತು.
ಪ್ರಭಾರ ಮ್ಯಾನೇಜರ್ ಜೆ.ವ್ಹಿ. ಅಂಗಡಿ ವರದಿ ವಾಚನ ಮಾಡಿದರು. ನಿರ್ದೇಶಕರಾದ ಪಿ.ಎಲ್. ರಘಪ್ಪನವರ ಸ್ವಾಗತಿಸಿದರು. ಪ್ರಾರ್ಥನಾ ಗೀತೆಯನ್ನು ಎ.ಬಿ. ಅರ್ಕಸಾಲಿ, ಮಲ್ಲಯ್ಯ ಪೂಜಾರ ನಡೆಸಿಕೊಟ್ಟರು.
ನಿರ್ದೇಶಕರಾದ ಪ್ರಭಾಕರ ರಘಪ್ಪನವರ, ವೃಷಭೇಂದ್ರ ಪಟ್ಟಣಶೆಟ್ಟಿ, ಜೆ.ಕೆ. ಕಡ್ಲಾಸ್ಕರ, ಎಂ.ಜೆ. ಚೌಧರಿ, ಮಂಜುಳಾ ದೇವಲಾಪೂರ, ಆರ್.ಎಸ್. ರೋಟ್ಟಿ, ಆರ್.ಸಿ. ಶೀಲವಂತರ, ದೇವರಾಜ ಗಬ್ಬೂರ, ಸಿ.ಬಿ. ಸಂಗೇದೇವರಕೊಪ್ಪ, ಗಣ್ಯರಾದ ಮುರುಗೆಪ್ಪ ಕಟ್ಟಿ, ಮಾದೇವ ಮೇಟಿ, ಎಸ್.ಬಿ. ಅಮರಗೋಳ, ನಿಂಗಪ್ಪ ನಿಂಬಣ್ಣವರ, ರವಿ ಕೋಳೇಕರ, ಪ್ರಭಾಕರ ನಾಯಕ, ಮುರಳಿ ವರ್ಕು, ರಾಕೇಶ ಅಳಗವಾಡಿ, ಮಾದೇವಪ್ಪ ಹಡಪದ, ಡಾ. ವೈ.ಬಿ. ಡಂಬಳ, ಕರುಣಾಕರ ಶೆಟ್ಟಿ, ವಿ.ಬಿ. ಶಿವನಗೌಡ್ರ, ಕೆ.ಬಿ. ಗುಡಿಹಾಳ, ಮಂಜುನಾಥ ಧನಿಗೊಂಡ ಹಾಗೂ ಬ್ಯಾಂಕಿನ ಸಿಬ್ಬಂದಿ ಎ.ಬಿ. ಮಿಠಾಯಿಗಾರ, ಎಸ್.ಎಸ್. ಅಮರಗೋಳ, ಫರೀದಾ ಬೇಪಾರಿ, ಅನಂತ ರಘಪ್ಪನವರ, ಕೆ.ಎಂ. ಚುಟಗೇನವರ, ಆಯ್.ಆರ್. ಮುಳ್ಳೂರ, ಮಹಾವೀರ ಜವಳಿ ಉಪಸ್ಥಿತರಿದ್ದರು.

# ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದೆ: ರಾಘವೇಂದ್ರ ಆನೇಗುಂದಿ

**ಧಾರವಾಡ :** ವಿಶ್ವ ಪರ್ಯಟನೆ ಮಾಡುವುದರಿಂದ ಜೀವನಾನುಭವ ಹೆಚ್ಚುತ್ತದೆ ಮತ್ತು ಪ್ರವಾಸೋದ್ಯಮವು ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ಪ್ರೆಸ್ಟೀಜ್ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ನಿರ್ದೇಶಕ ರಾಘವೇಂದ್ರ ಆನೆಗುಂದಿ ಅವರು ಹೇಳಿದರು.
ಅವರು ಇಂದು ಬೆಳಿಗ್ಗೆ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಧಾರವಾಡ ಪ್ರೆಸ್ಟೀಜ್ ಇನ್ಸ್ಟೀಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಸಹಯೋಗದಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.
ರಾಜ್ಯ ಮತ್ತು ದೇಶದಲ್ಲಿ ಸಾವಿರಾರು ಪ್ರವಾಸಿ ತಾಣಗಳು ಇವೆ ಮತ್ತು ಲಕ್ಷಾಂತರ ಪ್ರವಾಸಿಗರ ಸಂಚರಿಸುತ್ತಾರೆ, ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯು ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದು ಇಂದು ಹಂಪಿ ಮತ್ತು ಇನ್ನಿತರ ಪ್ರವಾಸಿ ತಾಣಗಳ ಉಳಿವಿಗೆ ಪ್ರವಾಸೋದ್ಯಮ ಮತ್ತು ಪ್ರವಾಸೋದ್ಯಮ ಇಲಾಖೆ ಕಾರಣ ಎಂದು ತಿಳಿಸಿದರು.
ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನು ಒಂದು ಊರಿನಿಂದ ಇನ್ನೊಂದು ಊರಿಗೆ, ಜಿಲ್ಲೆ, ರಾಜ್ಯ, ದೇಶದಿಂದ ದೇಶಕ್ಕೆ ಪ್ರಯಾಣ ಮಾಡಬೇಕು. ನಮ್ಮ ಸುತ್ತ ಮುತ್ತಲಿನ ಪ್ರಕೃತಿ ನಮಗೆ ವಿವಿಧ ರೀತಿಯ ಕೊಡುಗೆಯನ್ನು ನೀಡುತ್ತಿದೆ ಎಂದು ಅವರು ಹೇಳಿದರು.
ಮಾನವ ತನ್ನ ಸ್ವಾರ್ಥಕ್ಕಾಗಿ ಗಿಡ ಕಡೆಯುವುದು, ಮಣ್ಣು ಕೊರೆಯುವ ಮೂಲಕ ಪ್ರಕೃತಿಗೆ ಹಾನಿ ಮಾಡುತ್ತಿದ್ದಾನೆ. ಹೆಚ್ಚು ಜನ ಸಂಖ್ಯೆಯಿಂದ ಭೂಮಿಯ ಮೇಲಿನ ಪ್ರಕೃತಿ ನಾಶವಾಗುತ್ತಿದೆ ಇದರಿಂದ ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮ ಎನ್ನುವುದು ಊಹೆ ಆಗುತ್ತದೆ ಎಂದು ಅವರು ಹೇಳಿದರು. ಪ್ರತಿಯೊಂದು ರಾಷ್ಟ್ರವು ತಮ್ಮದೇ ಆದ ಉಡುಗೆ ತೊಡುಗೆ, ಆಚಾರ ವಿಚಾರ, ಆಡಳಿತ, ಉದ್ಯಮಗಳನ್ನು ಹೊಂದಿವೆ. ಪ್ರಪಂಚದಲ್ಲಿನ 195 ರಾಷ್ಟ್ರಗಳು ತಮ್ಮದೇ ಆದಂತಹ ಆಚರಣೆಗಳು, ಭಾಷೆ, ಸಂಸ್ಕೃತಿಯನ್ನು ಹೊಂದಿವೆ. ಈ ವೈವಿಧ್ಯಮಯ ಬದುಕನ್ನು ಅವಕಾಶ ಸಿಕ್ಕರೆ ಎಲ್ಲರೂ ನೋಡಬೇಕೆಂದು ಪ್ರೆಸ್ಟೀಜ್ ಇನ್ಸ್ಟಿಟ್ಯೂಟ್‌ನ ಉಪನ್ಯಾಸಕ ವಸೀಮ್ ಫಾರೂಕಿ ಅವರು ಹೇಳಿದರು.
ಹಿಂದುಸ್ಥಾನ ಯಾತ್ರಾ ಸಂಸ್ಥೆಯ ವಿಲಾಸಕುಮಾರ ದೇಸಾಯಿ ಅವರು ಪ್ರವಾಸೋದ್ಯಮ ಮತ್ತು ಶಾಂತಿ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ನ್ಯಾಯವಾದಿ ರವಿ ಕುಲಕರ್ಣಿ ಕಾರ್ಯಕ್ರಮವನ್ನು ನಿರೂಪಿಸಿದರು.
ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಹೇಮಂತ ದೇಸಳ್ಳಿ, ಸಮಾಲೋಚಕ ಚೇತನ್ ಕ್ಯಾಸನೂರ, ವಿಭಾಗದ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬೈಕ್ ಕಳ್ಳತನ: ಮಹಿಳೆಯರು ಸೇರಿ ಐವರ ಬಂಧನ



**ಹುಬ್ಬಳ್ಳಿ :** ಹು-ಧಾ ಮಹಾನಗರದಲ್ಲಿ ಬೈಕ್ ಕಳ್ಳತನ ಮಾಡುತ್ತಿದ್ದ ಇಬ್ಬರು ಮಹಿಳೆಯರು ಸೇರಿ ಐವರನ್ನು ಪೊಲೀಸರು ಬಂಧಿಸಿದ್ದು, ಬಂಧಿತರಿಂದ 12 ವಿವಿಧ ಬೈಕ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಎನ್.ಶಶಿಕುಮಾರ್ ಹೇಳಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು,ಪ್ರಕರಣದಲ್ಲಿಕೇಶ್ವಾಪೂರದರೇಷ್ಮಾಗುಡಗೇರಿ, ಗದಗಿನ ಆಸ್ಮಾಬಾನು ಬಾಗವಾನ್ ಉರ್ಫ್ ಮುಲ್ಲಾ, ರಾಮನಗರದ ರವಿ ಉರ್ಫ್ ನೀಲೇಶ್ ಬಣಸೋಡೆ, ಗದಗಿನಮುಬಾರಕ್ ಬಾಗವಾನ್,ಹುಬ್ಬಳ್ಳಿಕೆಕೆನಗರದ ದಸ್ತಗೀರ್ ಧಾರವಾಡ ಎಂಬವರನ್ನು ಬಂಧಿಸಲಾಗಿದೆ ಎಂದು ಹೇಳಿದರು.
ಆರೋಪಿಗಳ ವಿರುದ್ಧ ಜಿಲ್ಲೆಯಲ್ಲದೇ ವಿವಿಧ ಜಿಲ್ಲೆಗಳಲ್ಲಿ ವಿವಿಧ ಪ್ರಕರಣಗಳು ದಾಖಲಾಗಿವೆ ಎಂದು ತಿಳಿದು ಬಂದಿದ್ದು, ಸದ್ಯ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ 7 ಕೇಶ್ವಾಪೂರ ಠಾಣೆಯಲ್ಲಿ 3, ಹುಬ್ಬಳ್ಳಿ ಉಪನಗರ ಹಾಗೂ ಧಾರವಾಡ ಶಹರ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ.
ಆರೋಪಿತರಿಂದ ಸುಮಾರು 6 ಲಕ್ಷ ರೂ ಮೌಲ್ಯದ 10 ವಿವಿಧ ಕಂಪನಿಯ ಸ್ಕೂಟಿಗಳು ಹಾಗೂ 2 ಬೈಕ್ ವಶಪಡಿಸಿಕೊಳ್ಳಲಾಗಿದೆ. ನಗರದಲ್ಲಿ ದಾಖಲಾದ ಪ್ರಕರಣಗಳನ್ನು ಪತ್ತೆ ಮಾಡುವ ಸಂದರ್ಭದಲ್ಲಿ ಸಿಸಿ ಟಿವಿ ಕ್ಯಾಮರಾ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಮಹಿಳೆಯರು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಮಹಿಳೆಯ ಮೂಲಕ ಆರೋಪಿತರು ಬೈಕ್ ಕಳ್ಳತನ ಮಾಡುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ ಎಂದು ಅವರು ತಿಳಿಸಿದರು.
ಈ ಸಂದರ್ಭದಲ್ಲಿ ಡಿಸಿಪಿ ಮಹಾನಿಂಗ ನಂದಗಾವಿ, ಎಸಿಪಿ ಶಿವಪ್ರಕಾಶ್ ನಾಯಕ್, ವಿದ್ಯಾನಗರ ಠಾಣೆಯ ಪೊಲೀಸ್ ಇನ್ಸ್ಪೆಕ್ಟರ್ ಜಯಂತ ಗೌಳಿ, ಪಿಎಸ್ಐ ಶ್ರೀಮಂತ ಹುಣಸಿಕಟ್ಟಿ, ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಇದ್ದರು.

# ರೈತರಿಗೆ ಮೂರು ದಿನದ ಸಾಂಸ್ಥಿಕ ತರಬೇತಿ

**ಧಾರವಾಡ :** 2024-25 ನೇ ಸಾಲಿನ ಅಕ್ಟೋಬರ ಮಾಹೆಯಲ್ಲಿ ಧಾರವಾಡ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ರೈತರಿಗೆ ಮೂರು ದಿನದ ಸಾಂಸ್ಥಿಕ ತರಬೇತಿಯನ್ನು ಆಯೋಜಿಸಲಾಗಿದೆ.
ಅಕ್ಟೋಬರ್ 3 ರಿಂದ ಅಕ್ಟೋಬರ್ 5 ವರೆಗೆ ವಿವಿಧ ಬೆಳೆಗಳ ಕೊಯ್ಲೋತ್ತರ ತಾಂತ್ರಿಕತೆಗಳು, ಸಂಸ್ಕರಣೆ, ಮೌಲ್ಯವರ್ಧನ ಹಾಗೂ ಮಾರುಕಟ್ಟೆ ಎಂಬ ವಿಷಯ ಕುರಿತು ಹಾಗೂ ಅಕ್ಟೋಬರ್ 14 ರಿಂದ ಅಕ್ಟೋಬರ್ 16 ವರೆಗೆ ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಎಂಬ ವಿಷಯದ ಕುರಿತು ತರಬೇತಿ ನೀಡಲಾಗುವುದು.
ಆಸಕ್ತ ರೈತರು ಸೆಪ್ಟೆಂಬರ್ 30, 2024 ರೊಳಗಳಾಗಿ ದೂರವಾಣಿ ಸಂಖ್ಯೆ:0836-2978374, ಮೊ.ಸಂ: 8277931382 ಕ್ಕೆ ಕರೆ ಮಾಡಿ ತಮ್ಮ ಹೆಸರನ್ನು ನೊಂದಾಯಿಸಬಹುದು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೋಷಕರ ಪತ್ತೆ

**ಧಾರವಾಡ :** ಬಾಲನ್ಯಾಯ ಕಾಯ್ದೆ 2015 ರ ಪ್ರಕಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಧಾರವಾಡದಡಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪಾಲನೆ, ಪೋಷಣೆಗೆಂದು ದಾಖಲಾಗಿರುವ ಮಕ್ಕಳ ಪಾಲಕರು ಅಥವಾ ಪೋಷಕರ ಪತ್ತೆಯಾಗಿರುವುದಿಲ್ಲ.
ಆದ್ದರಿಂದ ಹುಬ್ಬಳ್ಳಿಯ ಮನೋವಿಕಲ ಬಾಲಕಿಯರ ಸರ್ಕಾರಿ ಬಾಲಮಂದಿರದ ಯಲ್ಲಮ್ಮ, ಮೌನಾ, ಶೃತಿ, ಪ್ರಿಯಾ, ಹಾಗೂ ರೂಪಾ ಎಂಬ ಮಕ್ಕಳ ಪಾಲಕರು ಅಥವಾ ಪೋಷಕರ ಕಾನೂನು ರೀತಿ ಹಕ್ಕುಳ್ಳವರು ಎಲ್ಲಿದ್ದರೂ 4 ತಿಂಗಳ ಅವಧಿ ಮುಗಿಯುವದರ ಒಳಗಾಗಿ ಧಾರವಾಡ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸಂಪರ್ಕಿಸಬೇಕು. ಒಂದು ವೇಳೆ ಯಾರೂ ವಾರಸದಾರರು ಬಾರದ ಪಕ್ಷದಲ್ಲಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೀರೇಶ ನಾಗಠಾಣರಿಂದ ಸುಗಮ ಸಂಗೀತ ಕಾರ್ಯಕ್ರಮ




**ಬಾಗಲಕೋಟೆ :** ನವನಗರದ ಕಲಾಭವನದಲ್ಲಿ ಬಾಗಲಕೋಟೆ ತಾಲೂಕಾ ಶಿಕ್ಷಕರ ಘಟಕದಿಂದ ಆಯೋಜಿಸಲಾಗಿದ್ದ ಶಿಕ್ಷಕರ ಸಮಾವೇಶ ಮತ್ತು ಆದರ್ಶ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಗಲಕೋಟೆ ಗಾಯಕ ಮತ್ತು ಧಾರವಾಡ ಆಕಾಶವಾಣಿ ಕಲಾವಿದ ವೀರೇಶ ನಾಗಠಾಣ ಮತ್ತು ಸ್ವರಲಯ ಸಂಗೀತ ಶಾಲೆಯ ಪ್ರಾಚಾರ್ಯ ಶಶಿಧರ ಜಿಗಜಿನ್ನಿ ಅವರು ಸುಗಮ ಸಂಗೀತ ಕಾರ್ಯಕ್ರಮ ನೀಡಿದರು. ವೀರೇಶ ನಾಗಠಾಣ ಅವರ ಗಾಯನಕ್ಕೆ ನೆರೆದ ಜನಸ್ತೋಮ ತಲೆದೂಗಿ ಚಪ್ಪಾಳೆ ಮೂಲಕ ಹರ್ಷ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ಬಾಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ,ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಭಾರತೀಯ ಜನತಾ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಚೆಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ




**ಲೋಕಾಪುರ :** ಬಾಗಲಕೋಟೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕ್ರೀಡಾಕೂಟದಲ್ಲಿ ಸಮೀಪದ ಮುರಾರ್ಜಿ ದೇಸಾಯಿ ವಸತಿ ಶಾಲೆ ವಿದ್ಯಾರ್ಥಿನಿಯರಾದ ರಂಜಿತಾ ಡಾಲಿ ಇವಳು ಪ್ರಾಥಮಿಕ ವಿಭಾಗದ ಜಿಲ್ಲಾಮಟ್ಟದ ಚೆಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಮತ್ತು ಪ್ರೌಢ ವಿಭಾಗದಲ್ಲಿ ಪವಿತ್ರಾ ಬಸನ್ನವರ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಎಂದು ಪ್ರಾಚಾರ್ಯ ವಿಜಯಕುಮಾರ ಬಿರಾದಾರ ತಿಳಿಸಿದ್ದಾರೆ.
ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮೈಬೂಬ ತುಂಬುರಮಟ್ಟಿ, ಹಾಗೂ ದೈಹಿಕ ಶಿಕ್ಷಕರಾದ ಲಕ್ಷ್ಮಣ ಗುರಡ್ಡಿ ಹಾಗೂ ಎಲ್ಲಾ ವಸತಿ ಶಾಲೆಯ ಸಿಬ್ಬಂದಿಗಳು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಲತಾ ಕೆ.ಎಸ್.ಹೆಗಡೆ ಅವರಿಗೆ ಕೆಂಪೇಗೌಡ ಸ್ವರ್ಣ ಪದಕ ಪ್ರಧಾನ



ಕರ್ನಾಟಕ ಕನ್ನಡ ಸಾಹಿತ್ಯ ಲೋಕ ನೆಲಮಂಗಲ ಇವರು ಪವಾಡ ಶ್ರೀ ಬಸವಣ್ಣ ದೇವರ ಮಠ, ನೆಲಮಂಗಲದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಕವಿಗೋಷ್ಠಿ ಮತ್ತು ಚತುರಂಗ ತಜ್ಞ ನಾಡಪ್ರಭು ಕೆಂಪೇಗೌಡರ ಕವನ ಲೋಕಾರ್ಪಣೆ ಕಾರ್ಯಕ್ರಮದ ಕವಿಗೋಷ್ಠಿಯಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಕವಯತ್ರಿ ಮತ್ತು ಸಾಹಿತಿಗಳಾದ ಶ್ರೀಮತಿ ಲತಾ ಕೆ.ಎಸ್.ಹೆಗಡೆ ಇವರಿಗೆ ಕೆಂಪೇಗೌಡರ ಸ್ವರ್ಣ ಪದಕವನ್ನು ನೀಡಿ ಅಭಿನಂದಿಸಲಾಯಿತು.

# ವಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



**ಲೋಕಾಪುರ:** ಬಾಗಲಕೋಟೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಸಮೀಪದ ಮುರಾರ್ಜಿ ದೇಸಾಯಿ ವಸತಿ ಶಾಲೆ ವಿದ್ಯಾರ್ಥಿನಿಯರು ಜಿಲ್ಲಾಮಟ್ಟದ ವಾಲಿಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಎಂದು ಪ್ರಾಚಾರ್ಯ ವಿಜಯಕುಮಾರ ಬಿರಾದಾರ ತಿಳಿಸಿದ್ದಾರೆ.
ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮೈಬೂಬ ತುಂಬುರಮಟ್ಟಿ, ಹಾಗೂ ದೈಹಿಕ ಶಿಕ್ಷಕರಾದ ಲಕ್ಷ್ಮಣ ಗುರಡ್ಡಿ ಹಾಗೂ ಎಲ್ಲಾ ವಸತಿ ಶಾಲೆಯ ಸಿಬ್ಬಂದಿಗಳು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಮುಗಳಖೋಡದಲ್ಲಿ ದೇವಿ-ಪುರಾಣ-ದಸರಾ ಸಾಂಸ್ಕೃತಿಕ ಮಹೋತ್ಸವ

**ಮುಧೋಳ :** ತಾಲೂಕಿನ ಮುಗಳಖೋಡದ ಸಿದ್ಧಾರೂಢ ಭಾರತಿ ಆಶ್ರಮದಲ್ಲಿ ಅಕ್ಟೋಬರ್ 3 ರಿಂದ 12 ರ ವರೆಗೆ ಶರನ್ನವರಾತ್ರಿ ನಿಮಿತ್ಯ ದೇವಿ ಪುರಾಣ ಹಾಗೂ ದಸರಾ ಸಾಂಸ್ಕೃತಿಕ ಮಹೋತ್ಸವವು ವಿಜೃಂಭಣೆಯಿಂದ ಜರುಗಲಿದೆ ಎಂದು ಸಿದ್ಧಾರೂಢ ಭಾರತಿ ಆಶ್ರಮದ ಗುರುಪ್ರಸಾದ್ ಸ್ವಾಮೀಜಿ ತಿಳಿಸಿದ್ದಾರೆ. ಸಿದ್ಧಾರೂಢ ಭಾರತಿ ಆಶ್ರಮದ ಶರಣಬಸವ ಶಾಸ್ತ್ರಿಗಳವರಿಂದ ಪ್ರತಿ ದಿನ ಬೆಳಿಗ್ಗೆ 5-30 ರಿಂದ 7 ರ ವರೆಗೆ ಹಾಗೂ ಸಂಜೆ 7-30 ರಿಂದ ರಾತ್ರಿ 9 ವರೆಗೆ ದೇವಿ ಪಾರಾಯಣ-ಪುರಾಣ ಕಾರ್ಯಕ್ರಮವು ನಡೆಯಲಿದೆ. ವಿವಿಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು. 12 ರಂದು ಬೆಳಿಗ್ಗೆ 8 ಗಂಟೆಗೆ ಶಾಂಭವಿಯ ವಿಶೇಷ ಪೂಜಾ ಕಾರ್ಯಕ್ರಮ, ನವದುರ್ಗಿಯರಿಗೆ ಉಡಿ ತುಂಬುವದು, ಸೇವಾ ಧುರೀಣರಿಗೆ ಸತ್ಕಾರ, ಮಂಗಲ ಮಹಾಪ್ರಸಾದ, ಸಂಜೆ 6-30ಕ್ಕೆ"ಬನ್ನಿ"ಮುಡಿಯುವಕಾಯ9ಕ್ರಮದೊಂದಿಗೆ ಶರನ್ನವರಾತ್ರಿ ಮಹೋತ್ಸವವು ಸಂಪನ್ನಗೊಳ್ಳುವುದು ಎಂದು ತಿಳಿಸಿದ್ದಾರೆ.

# ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗುವುದು ಹೃದಯವಂತರ ಗುಣ: ಧರೆಪ್ಪ ಉಳ್ಳಾಗಡ್ಡಿ



**ರಬಕವಿ-ಬನಹಟ್ಟಿ:** ಇಂದು ಶಿಕ್ಷಣಕ್ಕೆ ಎಲ್ಲಿಲ್ಲದ ಆದ್ಯತೆಯಿದೆಯಾದರೂ, ಮನೆಯಲ್ಲಿನ ಬಡತನದ ಕಾರಣಕ್ಕೆ ಬಟ್ಟೆ ಮತ್ತು ನೋಟಬುಕ್ಕಗಳ ಕೊರತೆಯಿಂದ ಶಾಲೆಗಳಿಗೆ ತೆರಳಲಾರದ ದುಸ್ಥಿತಿಯಲ್ಲಿ ಸಹಸ್ರಾರು ಸಂಖ್ಯೆಯ ಮಕ್ಕಳು ಶಾಲೆ ಬಿಡುತ್ತಿದ್ದಾರೆ. ನಾನು ಕೂಡ ಬಡತನದ ಕಾರಣಕ್ಕೆ ಸಮವಸ್ತ್ರ ಮತ್ತು ನೋಟಬುಕ್ಕಗಳನ್ನು ಖರೀದಿಸಲಾಗದ ಸ್ಥಿತಿಯ ಕಾರಣಕ್ಕೆ ಕಲಿಕೆಯಿಂದ ವಂಚಿತನಾದೆ. ಇಂಥ ಸ್ಥಿತಿ ಯಾವ ಮಕ್ಕಳಿಗೂ ಬರಬಾರದೆಂದು ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗಲು ಬೆರಳೆಣಿಕೆಯ ಹೃದಯವಂತರು ಮುಂದಾಗಿರುವುದು ಪ್ರಶಂಸಾರ್ಹ. ಭಾರತ ಗ್ಯಾಸ್ ಮಾಲೀಕರಾದ ಸೋಮಶೇಖರ ಕೊಟ್ರಶೆಟ್ಟಿ ಬಡಮಕ್ಕಳಿಗೆ ನೋಟಬುಕ್ಕಗಳನ್ನು ವಿತರಿಸುತ್ತಿರುವುದು ನನಗೆ ನನ್ನ ಬಾಲ್ಯದ ಜೀವನದ ಸ್ಮರಣೆಯಾಯಿತು. ಆಗ ಇಂಥ ದಾನಿಗಳಿದ್ದಲ್ಲಿ ನಾನು ಶಿಕ್ಷಣದಿಂದ ವಂಚಿತನಾಗುತ್ತಿರಲಿಲ್ಲ ಎನಿಸುತ್ತಿದೆ ಎಂದು ಬೆಳಗಾವಿ ವಲಯ ಟೆಲಿಕಾಂ ಸಮೀತಿ ನೂತನ ನಿರ್ದೇಶಕ ಧರೆಪ್ಪ ಉಳ್ಳಾಗಡ್ಡಿ ನುಡಿದರು. ಭಾನುವಾರದಂದು ರಬಕವಿಯ ಬಾಗೋಜಿಮಠದಲ್ಲಿ ಶ್ರೀಡಿ.ಕೆ.ಕೊಟ್ರಶೆಟ್ಟಿ ಫೌಂಡೇಶನ್ ಹಾಗೂ ರಬಕವಿ ಬಣಜಿಗ ಸಮಾಜ ಆಯೋಜಿಸಿದ್ದ ಸಾಧಕರ ಸನ್ಮಾನ ಮತ್ತು ಬಡ ಮಕ್ಕಳಿಗೆ ನೋಟಬುಕ್‌ಗಳ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಡತನ ಪ್ರತಿಭೆಗಳಿಗೆ ಅಡ್ಡಿಯಾಗದ ಎಂದು ಹೇಳಲಾಗುತ್ತಿದ್ದರೂ ಇಂದಿಗೂ ಬಡತನ ಮಕ್ಕಳ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುತ್ತಿರುವುದು ಸತ್ಯವಾಗಿದೆ. ಸಮಾಜದ ವಿವಿಧ ಸ್ತರಗಳಲ್ಲಿನ ಜನತೆ ತಮ್ಮ ಕೈಲಾದಷ್ಟು ನೆರವು ಕಲ್ಪಿಸಿದಲ್ಲಿ ಅನಕ್ಷರತೆ ದೇಶದಿಂದ ದೂರಾಗುವುದೆಂದರು.
ನೂತನ ನಗರಾಧ್ಯಕ್ಷೆ ವಿದ್ಯಾ ದಬಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಜಿಲ್ಲಾ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ವಿಜೇತರಾದ ರತ್ನಾ ಝುಳಕಿ, ಸುಜಾತಾ ಜಾಧವ, ಸಂತೋಷಿಮಾ ರಾಮದುರ್ಗ ಇವರು ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದರು. ಬಣಜಿಗ ಸಮಾಜದ ಅಧ್ಯಕ್ಷ ಗಿರೀಶ ಮುತ್ತೂರ ಪ್ರತಿಭೆಗಳನ್ನು ಗೌರವಿಸುವುದು ಮತ್ತು ಪ್ರತಿಭೆಗಳಿಗೆ ಸಹಾಯ ನೀಡುವುದು ಹೊಣೆಗಾರಿಕೆಯುಳ್ಳ ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಎಲ್ಲರೂ ಸಮನ್ವಯತೆಯಿಂದ ಶ್ರಮಿಸಿದರೆ ನಮ್ಮ ಭಾರತಪ್ರತಿಭೆಗಳಸಾಗರವಾಗುವುದೆಂದರು.
ವೇದಿಕೆಯಲ್ಲಿ ಫೌಂಡೇಶನ್ ಅಧ್ಯಕ್ಷ ಉದ್ಯಮಿ ಸೋಮಶೇಖರ ಕೊಟ್ರಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸುನೀಲ ಕುಳ್ಳೋಳ್ಳಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಗಡೆನ್ನವರ ನಿರೂಪಿಸಿದರು. ವಿಜಯಕುಮಾರ ಹಲಕುರ್ಕಿ ವಂದಿಸಿದರು.
ಚಂದ್ರಶೇಖರ ಹುಲಗಬಾಳಿ, ಅಶೋಕ ಕೋತೀನ, ಉಮೇಶ ಹನಗಂಡಿ, ಉದಯಕುಮಾರ ಜಿಗಜಿನ್ನಿ, ಶಿವಾನಂದ ಮುತ್ತೂರ, ಗಜಾನನ ತೆಗ್ಗಿ, ಪ್ರಭಾಕರ ಢಪಳಾಪೂರ, ರವಿ ಮುತ್ತೂರ, ಬಸವರಾಜ ದುಂಬಾಳಿ, ಸುನೀಲ ಕುಳ್ಳೋಳ್ಳಿ, ಮಾರುತಿ ಗಾಡಿವಡ್ಡರ, ಶ್ರೀದೇವಿ ಮಹಿಳಾ ಸಂಘದ ಅಧ್ಯಕ್ಷೆ ಶಿಲ್ಪಾ ಮುತ್ತೂರ, ಶಾರದಾ ಕೊಟ್ರಶೆಟ್ಟಿ, ನಿವೇದಿತಾ ಪರಮಶೆಟ್ಟಿ, ಸಂಗಮೇಶ ಗುಣಕಿ ಸೇರಿದಂತೆ ಪ್ರಮುಖರಿದ್ದರು.

# ಮೂಡಾ ಹಗರಣ ಬಿಜೆಪಿ ಷಡ್ಯಂತ್ರ-ಅಹಿಂದ ಸಿಎಂ ಸಿದ್ದರಾಮಯ್ಯನವರಿಗೆ ಅಹಿಂದ ಬೆಂಬಲ



**ಚಿಮ್ಮಡ :** ಮುಡಾ ಹಗರಣ ಬಿಜೆಪಿಯ ವ್ಯವಸ್ಥಿತ ಷಡ್ಯಂತ್ರವಾಗಿದ್ದು ಇದು ಬಿಜೆಪಿಗೇ ತಿರುಗುಬಾಣವಾಗಲಿದೆ ನಮ್ಮ ಬೆಂಬಲ ಯಾವತ್ತೂ ಭಾಗ್ಯವಿದಾತ ಸಿಎಂ ಸಿದ್ದರಾಮಯ್ಯನವರಿಗೆ ಇರಲಿದೆ ಎಂದು ರಬಕವಿ ಬನಹಟ್ಟಿ ತಾಲೂಕು ಅಹಿಂದ ಸಂಘಟಣೆ ಅಧ್ಯಕ್ಷ ದೇವಪ್ಪ ಮಿಷವಾಡಗಿ ಹೇಳಿದ್ದಾರೆ.
ರಬಕವಿಯ ನಿರೀಕ್ಷಣಾ ಮಂದಿರದಲ್ಲಿ ನಡೆದ ಅಹಿಂದ ನಾಯಕರ ಸಭೆಯಲ್ಲಿ ಮಾತನಾಡಿದ ಅವರು ಕರ್ನಾಟಕದ ಎಲ್ಲ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸುತ್ತಿರುವ ಮಹಾನ್ ಸಿದ್ದಾಂತವಾದಿ, ಬುಧ್ಧ, ಬಸವಣ್ಣನವರ ಅನುಯಾಯಿ, ನುಡಿದಂತೆ ನಡೆಯುವ, ಕಳಂಕರಹಿತ ವ್ಯಕ್ತಿತ್ವದನಾಯಕಮುಖ್ಯಮಂತ್ರಿಸಿದ್ದರಾಮಯ್ಯನವರ ಹೆಸರಿಗೆ ಕಳಂಕತರುವ ಉದ್ದೇಶದಿಂದ ಬಿಜೆಪಿ ಷಡ್ಯಂತ್ರ ನಡೆಸುತಿದ್ದು ಅವರು ನಿರಪರಾದಿಯಾಗಿ ಹೊರಬರುವುದು ಖಚಿತವೆಂದರು.
ತೇರದಾಳ ತಾಲುಕಾಧ್ಯಕ್ಷ ಸಂಜು ಹಾಡಗಾರ ಮಾತನಾಡಿ ಸಿಎಂ ಸಿದ್ದರಾಮಯ್ಯನವರ ಜನಪ್ರೀಯತೆ ಸಹಿಸದೆ ಕೇಂದ್ರಸರಕಾರ ಹಾಗೂ ರಾಜ್ಯ ಬಿಜೆಪಿ ನಾಯಕರು ರಾಜ್ಯಪಾಲರನ್ನು ಕೈಗೊಂಬೆ ಮಾಡಿಕೊಂಡು ನಡೆಸುತ್ತಿರುವ ಪಿತೂರಿಯಾಗಿದ್ದು ಇದರಿಂದ ಬಿಜೆಪಿ ಮತ್ತಷ್ಟು ಜನರ ಬೆಂಬಲ ಕಳೆದುಕೊಳ್ಳಲಿದೆ ಎಂದರು.
ಚಿಮ್ಮಡಗ್ರಾ.ಪಂ.ಸದಸ್ಯಮಹಾಲಿಂಗಮಾಯಣ್ಣವರ, ಮಾತನಾಡಿದರು.
ಧುರೀಣರಾದ ಸಂಗಪ್ಪಾ ಕುಂದಗೋಳ, ಬಸವರಾಜ ಗುಡೋಡಗಿ, ರಾಹುಲ್ ಕಲಾಲ, ಸಿದ್ರಾಮ ಯರಗಟ್ಟಿ, ಯಮನಪ್ಪ ಶಿರೋಳ ಚಂದ್ರು ಇಮ್ಮಡಿ, ಪುಲಿಕೇಸಿ ಅಕ್ಕೆನ್ನವರ, ರಾಜು ಕಾಮಶೆಟ್ಟಿ, ಮಹಾವೀರ ಗುಡ್ಡದಮನಿ, ಹುಜೇಫಾ ಮುಲ್ಲಾ, ಗುರುಶಾಸ್ತ್ರಿ ಹೊಲ್ಲರ ಸಾಹಿಲ್ ಚಿಸ್ತಿ ಸೇರಿದಂತೆ ಹಲವು ಪ್ರಮುಖರು ಈ ಸಂಧರ್ಬದಲ್ಲಿ ಉಪಸ್ಥಿತರಿದ್ದರು.

# ಸಂಭ್ರಮದ ಯಲ್ಲಮ್ಮಾದೇವಿ ಜಾತ್ರಾ ಮಹೋತ್ಸವ

**ಚಿಮ್ಮಡ :** ಗ್ರಾಮದ ಆರಾದ್ಯ ದೇವತೆ ಶ್ರೀ ಎಲ್ಲಮ್ಮಾದೇವಿ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದೊಂದಿಗೆ ವಿಜ್ರಂಬನೆಯಿಂದ ನಡೆಯಿತು.
ಕಳೆದ ಎರಡು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವದಲ್ಲಿ ವಿವಿಧ ಸಾಂಸ್ಕೃತಿಕ ಜನಪದ, ಗ್ರಾಮೀಣ ಕ್ರೀಢಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿಶೇಷ ರೀತಿಯಲ್ಲಿ ನಡೆಸಲಾಯಿತು.
ಗುರುವಾರ ನಡೆದ ವಿವಿಧ ಸ್ಪರ್ದಾ ಕಾರ್ಯಕ್ರಮಗಳಲ್ಲಿ ಒಂದು ಎತ್ತು ಒಂದು ಕುದುರೆ ಸೇರಿ ಗಾಡಿ ಓಡಿಸುವ ಸ್ಪರ್ದೆ, ಜನರಲ್ ಕುದುರೆ ಓಟದ ಸ್ಪರ್ದೆ, ಒಂದು ನವತರ ಒಂದು ಸಾಮಾನ್ಯ ಕುದುರೆ ಓಟದ ಸ್ಪರ್ದೆ, ಇಬ್ಬರು ಸೇರಿ



25 ಎಚ್‌ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ದೆ ಹಾಗೂ ಐದು ಜನ ಸೇರಿ 3.5 ಕ್ವಿಂಟಾಲ್ ಭಾರ ಇರುವ ಟ್ರ್ಯಾಕ್ಟರ ಎಳೆಯುವ ಸ್ಪರ್ದೆಗಳು ಸೇರಿದಂತೆ ವಿವಿಧ ಗ್ರಾಮೀಣ ಭಾಗಗಳ ಕ್ರೀಢೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಶುಕ್ರವಾರ ಬೆಳಿಗ್ಗೆ ಮಾಯವ್ವದೇವಿ ಹಬ್ಬದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಮದ್ಯಾಹ್ನ ದೇವಿಯ ಉಡಿ ತುಂಬುವ ಕಾರ್ಯಕ್ರಮದಲ್ಲಿ ಸಕಲ ವಾದ್ಯ ವೃಂದಗಳೊಂದಿಗ ಗ್ರಾಮದ ಐದು ದೇವಿರ ದರ್ಶನ ಪಡೆಯಲು ವಿವಿಧ ವಾದ್ಯ ವೃಂದಗಳೊಂದಿಗೆ ಪಲ್ಲಕ್ಕಿ, ಮುತ್ತೈದೆಯರಿಂದ ಕುಂಭದೊಂದಿಗೆ ಮೆರವಣಿಗೆ ನಡೆಯಿತು. ನೆರೆಯ ಜಿಲ್ಲೆಗಳಿಂದ ಸಾವಿರಾರು ಜನ ಭಕ್ತರು ಆಗಮಿಸಿದ್ದರು, ಬಾಗಲಕೋಟ, ವಿಜಯಪೂರಹಾಗೂ ಬೆಳಗಾವಿ ಜಿಲ್ಲೆಗಳಿಂದ ಕ್ರೀಢಾಪಟುಗಳು ಈ ಸ್ಪರ್ದಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಬ್ರಹತ್ ಮೊತ್ತದ ಬಹುಮಾನಗಳನ್ನು ತಮ್ಮದಾಗಿಸಿಕೊಂಡರು. ಸರ್ವ ಧರ್ಮಿಯರು ಸೇರಿ ನಡೆಸುವ ಈ ಜಾತ್ರಾ ಮಹೋತ್ಸವದಲ್ಲಿ ಕಳ್ಳೆಪ್ಪ ನಡುವಿನಮನಿ, ಗಂಗಪ್ಪಾ ದೊಡಮನಿ, ಯಲ್ಲಪ್ಪ ದೊಡಮನಿ, ಲಕ್ಷ್ಮಣ ಮುಂದಿನಮನಿ, ಮಾಳಪ್ಪ ತಿಮ್ಮಾಪೂರ, ಗ್ರಾ.ಪಂ. ಮಾಜಿ ಅಧ್ಯಕ್ಷ ಬೀರಪ್ಪ ಹಳೆಮನಿ, ಭೀಮಪ್ಪ ತಿಮ್ಮಾಪೂರ, ಮಹಾಲಿಂಗ ಮಾಯಣ್ಣವರ ಸೇರಿದಂತ ಹಲವಾರು ಜನ ಪ್ರಮುಖರು ಜಾತ್ರಾ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು.

# ವ್ಹಾಲಿಬಾಲ್ ಜಿಲ್ಲಾ ಮಟ್ಟಕ್ಕೆ ಆಯ್ಕೆ



**ರಬಕವಿ :** ಇಲ್ಲಿನ ಅನುದಾನಿತ ಚನ್ನವೀರೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಜಮಖಂಡಿಯ 2024-25 ನೇ ಸಾಲಿನ ಶ್ರೀ ಬನಶಂಕರಿ ಎಚ್. ಪಿ .ಎಸ್. ಶಾಲೆಯಲ್ಲಿ ಶುಕ್ರವಾರ ನಡೆದ ಬಾಲಕರ ವ್ಹಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಎರಡೂ ತಂಡಗಳು ಜಮಖಂಡಿ ತಾಲೂಕು ಮಟ್ಟದ ವ್ಹಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.
ವಿಜೇತರಾದ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯ ಗುರುಗಳು ಮತ್ತು ಶಿಕ್ಷಕ ಸಿಬ್ಬಂದಿ ವರ್ಗ, ದೈಹಿಕ ಶಿಕ್ಷಣ ಶಿಕ್ಷಕರು ವಿಜೇತರಾದ ಎಲ್ಲ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

# ಪೌಷ್ಟಿಕ ಆಹಾರ ಎಲ್ಲರ ಅಗತ್ಯತೆಯಾಗಿದೆ: ಗುಡಿಸಲಮನಿ

**ರಬಕವಿ-ಬನಹಟ್ಟಿ :** ಪೌಷ್ಟಿಕ ಆಹಾರ ಎಲ್ಲರ ಅಗತ್ಯತೆಯಾಗಿದೆ. ಪ್ರತಿಯೊಬ್ಬರು ಆರೋಗ್ಯದಿಂದಿರಲು, ರೋಗ ರುಜಿನಗಳನ್ನು ತಡೆಗಟ್ಟಲು ಜೀವನದಲ್ಲಿ ಪ್ರಗತಿ ಸಾಧಿಸಲು ಪೌಷ್ಟಿಕ ಆಹಾರದ ಅಗತ್ಯತೆ ಬಹಳಷ್ಟಿದೆ ಎಂದು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಜಮಖಂಡಿ ವಲಯ ಯೋಜನಾಧಿಕಾರಿಗಳಾದ ನಿಂಗಪ್ಪ ಗುಡಿಸಲಮನಿ ಮಾತನಾಡಿದರು.
ಅವರು ಬನಹಟ್ಟಿ ವಲಯದ ಅಶೋಕ ಕಾಲೋನಿ ಶ್ರೀ ಮಂಜುನಾಥ ಜ್ಞಾನ ವಿಕಾಸ ಕೇಂದ್ರದಲ್ಲಿ ಹಮ್ಮಿಕೊಂಡ ಪೌಷ್ಠಿಕ ಆಹಾರ ಹಾಗೂ ಸಿರಿಧಾನ್ಯ ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಬ್ಬರು ನಿತ್ಯದ ಆಹಾರದಲ್ಲಿ ಪೌಷ್ಟಿಕಾಂಶವುಳ್ಳ ಆಹಾರ ಸೇವನೆಯ ಅಗತ್ಯತೆ ಇರುವುದರಿಂದ ಸದೃಢವಾದ ಆರೋಗ್ಯ ಮತ್ತು ಪೌಷ್ಟಿಕ ಮಟ್ಟವನ್ನು ಕಾಪಾಡಲು ಸಾದ್ಯ. ಮುಖ್ಯವಾಗಿ ಆರು ವರ್ಷದೊಳಗಿನ ಮಕ್ಕಳು, ಗರ್ಭಿಣಿ ಬಾಣಂತಿಯರು, ಕಿಶೋರಿಯರಿಗೆ ಪೌಷ್ಟಿಕಾಂಶವುಳ್ಳ ಸಮತೋಲನ ಆಹಾರ ಸೇವನೆ ಅತ್ಯಗತ್ಯ. ಸ್ಥಳೀಯವಾಗಿ ದೊರೆಯುವ ಏಕದಳ, ದ್ವಿದಳ ಧಾನ್ಯಗಳು, ಮೊಳಕೆ ಭರಿಸಿದ ಕಾಳು, ಸೊಪ್ಪು, ತರಕಾರಿ ಹಾಗೂ ಬೆಣ್ಣೆ, ತುಪ್ಪ, ಹಣ್ಣುಗಳ ನಿಯಮಿತ



ಸೇವನೆಯಿಂದ ಉತ್ತಮ ಪೌಷ್ಟಿಕ ಮಟ್ಟವನ್ನು ಕಾಪಾಡಿಕೊಳ್ಳಬಹುದು ಎಂದರು.
ಸಂಪನ್ಮೂಲ ವ್ಯಕ್ತಿಗಳಾದ ಆರೋಗ್ಯ ಇಲಾಖೆಯ ಎಂ. ಕೆ. ಮುಲ್ಲಾ ಮಾತನಾಡಿ, ಸಿರಿಧಾನ್ಯ ಬಳಕೆ ಬಗ್ಗೆ, ಪೌಷ್ಟಿಕತೆ ಕೊರತೆಯಾದರೆ ಆಗುವಂತಹ ಸಮಸ್ಯೆಗಳ ಬಗ್ಗೆ, ವಿಶೇಷವಾಗಿ ಹೆಣ್ಣು ಮಕ್ಕಳ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು.
ವಲಯದ ಮೇಲ್ವಿಚಾರಕರಾದ ಶಿವಾನಂದರವರು ಜ್ಞಾನ ವಿಕಾಸ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ, ಕಾರ್ಯಕ್ರಮದ ಮುಖ್ಯ ಉದ್ದೇಶಗಳ ಬಗ್ಗೆ ಮಾತನಾಡಿದರು.
ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀಮತಿ ಶೋಭಾರವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.
ಕಾರ್ಯಕ್ರಮದ ನಿರೂಪಣೆಯನ್ನು ಜ್ಞಾನ ವಿಕಾಸ ಸಮನ್ವಯಾಧಿಕಾರಿ ಶ್ರೀದೇವಿ ಮಾಡಿದರು. ಸೇವಾ ಪ್ರತಿನಿಧಿ ಪಾರ್ವತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಎಂ.ಕಾಂ ಪ್ರವೇಶಾತಿಗೆ ಅರ್ಜಿ ಅಹ್ವಾನ

**ಮಹಾಲಿಂಗಪುರ:** ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ ವಾಪ್ತಿಯ ಕೆ.ಎಲ್.ಇ ಸಂಸ್ಥೆಯ ಎಸ್.ಸಿ.ಪಿ ಕಲಾ, ವಿಜ್ಞಾನ ಮತ್ತು ಡಿ.ಡಿ. ಶಿರೋಳ ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸವಾಣಿಜ್ಯಶಾಸ್ತ್ರವಿಷಯದ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಮಾಹಿತಿಗೆ ವಿಶ್ವವಿದ್ಯಾಲಯ ಜಾಲತಾಣ www.bgku.ac.in ಗಮನಿಸಬಹುದು. ಆಸಕ್ತ ಅಭ್ಯರ್ಥಿಗಳು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ( UUCMS ) ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯ. ಮಾಹಿತಿಗೆ ಮಹಾವಿದ್ಯಾಲಯದ ಕಾರ್ಯಾಲಯಕ್ಕೆ ಬೇಟಿ ನೀಡಬಹುದು ಎಂದು ಮಹಾ ವಿದ್ಯಾಲಯದ ಪ್ರಾಚಾರ್ಯರಾದ ಡಾ. ಕೆ.ಎಮ್. ಅವರಾದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಲ್ಲವರ ಸಂಗದಿಂದ ಬಂಧನದಿಂದ ಮುಕ್ತಿ: ಬಸವಪ್ರಸಾದ ಶ್ರೀಗಳು

**ಜಮಖಂಡಿ :** ಬಲ್ಲವರ, ಮಹಾನುಭಾವಿಗಳ ಹಾಗೂ ಅನುಭಾವಿಗಳ ಸಂಗದಲ್ಲಿದ್ದು ವಿಷಯಾಸಕ್ತಿಯನ್ನು ದೂರೀಕರಿಸಿ ಜ್ಞಾನಾಸಕ್ತಿ, ಭಕ್ತಿಯಾಸಕ್ತಿ ಬೆಳೆಸಿಕೊಂಡರೆ ಮಾತ್ರ ವಿಷಯಗಳ ಬಂಧನದಿಂದ ಮುಕ್ತಿ ಸಾಧ್ಯ. ಮುಕ್ತಿ ಎಂದರೆ ಪರಮಸುಖ ಎಂದು ವಿಜಯಪುರ ಜ್ಞಾನ ಯೋಗಾಶ್ರಮದ ಬಸವಪ್ರಸಾದ ಮಹಾಸ್ವಾಮಿಗಳು ಹೇಳಿದರು.
ತಾಲ್ಲೂಕಿನ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದಲ್ಲಿ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಭಾನುವಾರ ನಡೆದ ಶ್ರೀಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ 'ವಿಷಯಾಸಕ್ತ ಮನಸ್ಸಿಗೆ ಮುಕ್ತಿ ಯಾವಾಗ?' ಎಂಬ ವಿಷಯ ಕುರಿತು ಅವರು ಆಶೀರ್ವಚನ ನೀಡಿದರು.
ವಿಷಯಗಳ ಜೊತೆಗೆ ಇರಬೇಕು. ಆದರೆ, ವಿಷಯಗಳ ಸ್ವರೂಪ ತಿಳಿದುಕೊಂಡು ಅವುಗಳಿಂದ ಪಾರಾಗಬೇಕು. ವಿಷಯಗಳ ದಾಹ ಕಡಿಮೆ ಆಗುವವರೆಗೆ ಮುಕ್ತಿ ಅಸಾಧ್ಯ. ದೇವನ ಸ್ಮರಣೆ ಮಾಡುವಾಗ ಬಹಿರ್ಮುಖವಾಗುವ ಇಂದ್ರಿಯಗಳನ್ನು ಅಂತರರ್ಮುಖ ಮಾಡಿಕೊಂಡರೆ ಮತ್ತು ಗುರುವಿನ ಕರುಣೆಯಾದರೆ ಮುಕ್ತಿ ಸಾಧ್ಯ ಎಂದರು.
ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ನೇತೃತ್ವ ವಹಿಸಿ




ಮಾತನಾಡಿ, ಯೋಗಿಗಳು, ಶರಣರು, ವೇದಾಂತಿಗಳು, ಕಾಯಕಯೋಗಿಗಳು, ಗುರುಗಳು ತೋರಿದ ಸನ್ಮಾರ್ಗದಲ್ಲಿ ಸಾಗಿದರೆ ಮುಕ್ತಿ ಪಡೆಯಲು ಸಾಧ್ಯ ಎಂದರು.
ಧ್ಯಾನ ಮತ್ತು ಪ್ರಾಣಾಯಾಮ ಮಾಡಿದರೆ ಮನಸ್ಸಿನ ನಿಯಂತ್ರಣ ಸಾಧ್ಯ ಎಂದು ಯೋಗಿಗಳು ಹೇಳಿದ್ದಾರೆ. ಇಷ್ಟಲಿಂಗ ಪೂಜೆ ಮಾಡಿದರೆ ಮನಸ್ಸು ಲಿಂಗರೂಪ ತಾಳುತ್ತದೆ. ಮನಸ್ಸು ಭಾವ ಪ್ರವೇಶ ಮಾಡುತ್ತದೆ ಎಂದು ಶರಣರು ಹೇಳಿದ್ದಾರೆ. ನಾನು ಆತ್ಮಸ್ವರೂಪ, ಶಿವಸ್ವರೂಪ ಎಂಬ ಜ್ಞಾನ ಉಂಟಾದಾಗ ಮುಕ್ತಿ ಸಾಧ್ಯ ಎಂದು ವೇದಾಂತಿಗಳು ಹೇಳಿದ್ದಾರೆ. ಸತ್ಯಶುದ್ಧ ಕಾಯಕದಲ್ಲಿ ತೊಡಗಿದರೆ ಮುಕ್ತಿ ಸಾಧ್ಯ ಎಂದು ಕಾಯಕಯೋಗಿಗಳು ಪ್ರತಿಪಾದಿಸಿದ್ದಾರೆ ಎಂದರು.
ಮಹಾಪ್ರಸಾದದ ದಾಸೋಹ ಮಾಡಿದ ಆಲಬಾಳ ಗ್ರಾಮದ ಬಸಪ್ಪ ತೇಲಿ ದಂಪತಿಯನ್ನು ಸನ್ಮಾನಿಸಲಾಯಿತು. ಗುರುಬಸುಗೌಡ ಪಾಟೀಲ, ಪರಮೇಶ್ವರ ತೇಲಿ(ಹಾರ್ಮೋನಿಯಂ), ರಾಮಚಂದ್ರ ಹೂಗಾರ(ತಬಲಾ), ಶೀಲಾ ಬೆಂಗಿ ಸಂಗಿತ ಸೇವೆ ಸಲ್ಲಿಸಿದರು. ಮುತ್ತು ಗೆದ್ದೆಪ್ಪನವರ ಸ್ವಾಗತಿಸಿದರು. ಪೃಥ್ವಿರಾಜ ಹೊನಗೌಡ ನಿರೂಪಿಸಿದರು.

# ಡಾ.ಷಣ್ಮುಖಯ್ಯ ತೋಟದಗೆ "ಆದರ್ಶ ರತ್ನ ದ್ರೋಣಾಚಾರ್ಯ ರಾಷ್ಟ್ರೀಯ ಪ್ರಶಸ್ತಿ



**ಕೊಪ್ಪಳ :** ಉತ್ತರ ಕನ್ನಡ ಜಿಲ್ಲೆ ಶಿರಶಿಯ ನೆಮ್ಮದಿ ಆವರಣದಲ್ಲಿ ಅಕ್ಷರ ದೀಪ ಪೌಂಡೇಶನ್ (ರಿ) ಅಕ್ಷರ ದೀಪ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲಾ ವೇದಿಕೆ ಆಯೋಜಿಸಿದ ಮಲೆನಾಡ ಅಕ್ಷರೋತ್ಸವ ಸಮಾರಂಭದಲ್ಲಿ ಕೊಪ್ಪಳ ತಾಲುಕಿನ ಮೈನಹಳ್ಳಿ ಗ್ರಾಮದ ಡಾ.ಷಣ್ಮುಖಯ್ಯ ತೋಟದರವರ ಸಾಹಿತ್ಯ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ಮಾಡಿದ ಸಾಧನೆ ಗುರುತಿಸಿ " ಅದರ್ಶ ರತ್ನ ದ್ರೋಣಾಚಾರ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.
ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅನಂತಮೂರ್ತಿ ಹೆಗಡೆ, ಅಧ್ಯಕ್ಷತೆಯನ್ನು ದತ್ತಗುರು ಕಂಠಿ, ಮುಖ್ಯ ಅತಿಥಿಗಳಾಗಿ ಶ್ರೀಮತಿ ಲತಾ ಹೆಗಡೆ, ಕೃಷ್ಣ ಪದಕಿ, ಗಣಪತಿ ಹೆಗಡೆ ಅನೇಕ ಗಣ್ಯರು ವೇದಿಕೆ ಮೇಲಿದ್ದರು.
ಡಾ.ದಿವ್ಯಾ ಹೆಗಡೆ ಕವಿಗೋಷ್ಠಿ ನಿರೂಪಣೆ ಮತ್ತು ಶ್ರೀಮತಿ ಯಶಸ್ವಿನಿ ಶ್ರೀಧರಮೂರ್ತಿ ಭವ್ಯ ಹಳೆಯೂರು ನಿರೂಪಣೆ ಮಾಡಿದರು.

# ರನ್ನಬೆಳಗಲಿ ಪಪಂ: ಒಂದೇ ವಾರ್ಡಿನ ಕೆಲಸಕ್ಕೆ 20.7 ಲಕ್ಷ ರೂ. ಕ್ರೀಯಾಯೋಜನೆ ಮಂಜೂರಾತಿಗೆ ತಡೆಗೆ ಅಧ್ಯಕ್ಷ-ಸದಸ್ಯರ ಒತ್ತಾಯ

**ಮಹಾಲಿಂಗಪುರ :** ರನ್ನಬೆಳಗಲಿ ಪಪಂನ 2019-20, 2020-21, 2022-23ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಕ್ಯಾಪಿಟಲ್ ಅಸೆಟ್ ಉಳಿಕೆ ಮೊತ್ತ ಹಾಗೂ ಸನ್ 2020-21 ರಿಂದ 2022-23ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದ ಉಳಿಕೆ ಮೊತ್ತದ ಕ್ರೀಯಾಯೋಜನೆಗೆ ಮಂಜೂರಾತಿ ತಡೆ ಹಿಡಿಯಬೇಕೆಂದು ರನ್ನಬೆಳಗಲಿ ಪಪಂ ಅಧ್ಯಕ್ಷೆರೂಪಾ ಸದಾಶಿವ ಹೊಸಟ್ಟಿ ಹಾಗೂ ಪಪಂನ ಆಡಳಿತ ಮಂಡಳಿಯ ಸದಸ್ಯರು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದರು.
ಶುಕ್ರವಾರ ಸಂಜೆ ಪಪಂ ಅಧ್ಯಕ್ಷರ ಕಛೇರಿಯಲ್ಲಿ ನಡೆದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದ ಅವರು ಪಪಂಗೆ ಇತ್ತಿಚಿಗೆ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯಾಗಿದೆ. ಪಪಂ ಆಡಳಿತಾಧಿಕಾರಿಗಳ ಅವಧಿಯಲ್ಲಿ 2019-20, 2020-21, 2022-23ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಕ್ಯಾಪಿಟಲ್ ಅಸೆಟ್ ಉಳಿಕೆ ಮೊತ್ತ ಹಾಗೂ ಸನ್ 2020-21 ರಿಂದ 2022-23ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದ ಉಳಿಕೆ ಮೊತ್ತದ 20.7 ಲಕ್ಷ ಕಾಮಗಾರಿಗಳನ್ನು ಕೇವಲ 15ನೇ ಒಂದೇ ವಾರ್ಡಿನ ಅಭಿವೃದ್ದಿ ಕೆಲಸಗಳಿಗೆ ಯಾಕೆ?, ಒಂದೇ ವಾರ್ಡಿಗೆ ಅತಿಹೆಚ್ಚು ಅನುದಾನ ಬಳಕೆ ಮಾಡಲು ಕಾರಣವೇನು?, ಉಳಿದ 17 ವಾರ್ಡಗಳ ಅಭಿವೃದ್ದಿ ಹೇಗೆ?, ಪಟ್ಟಣದ ಎಲ್ಲಾ ತೋಟದ ರಸ್ತೆಗಳು ಹದಗೆಟ್ಟಿವೆ. ಅದರಲ್ಲೂ ವಿಶೇಷವಾಗಿ 5ನೇ ವಾರ್ಡಿನ ಕೊರೆಮ್ಮ ತೋಟದ



ಶಾಲೆಯಿಂದ ನಾಗರಾಳ ಹದ್ದಿಯವರೆಗೆ, 8ನೇ ವಾರ್ಡಿನ ಜಗದಾಳ-ನಾವಲಗಿರಸ್ತೆಗಳುತೀವ್ರಹದಗೆಟ್ಟುಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಇಂತಹ ರಸ್ತೆಗಳಿಗೆ ಅನುದಾನ ನೀಡದೇ ರಾಜಕೀಯ ಒತ್ತಡದಿಂದ ಕೇವಲ ಒಂದೇ ವಾರ್ಡಿಗೆ ಅನುದಾನ ಬಳಕೆ ಮಾಡುತ್ತಿರವದರಿಂದ 20.7 ಲಕ್ಷ ಉಳಿಕೆ ಮೊತ್ತದ ಕ್ರೀಯಾಯೋಜನೆಗಳಿಗೆ ಯಾವುದೇ ಮಂಜೂರಾತಿ ನೀಡಬಾರದು. ಪಪಂನಲ್ಲಿ ಈಗ ಅಧ್ಯಕ್ಷ-ಉಪಾಧ್ಯಕ್ಷರಾಗಿ ಜನಪ್ರತಿನಿಧಿಗಳ ಆಡಳಿವಿರುವ ಕಾರಣ, ಪಪಂ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಇದೇ ಅನುದಾನದಲ್ಲಿ ಪಟ್ಟಣದ ಎಲ್ಲಾ 18 ವಾರ್ಡಗಳ ಅಭಿವೃದ್ದಿ ಕೆಲಸಗಳಿಗೆ ಹಂಚಿಕೆ ಮಾಡಲಾಗುವದು ಎಂದು ಪಪಂ ಅಧ್ಯಕ್ಷೆ ಶ್ರೀಮತಿ ರೂಪಾ ಹೊಸಟ್ಟಿ ಹೇಳಿದರು.
ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ :
ಪಪಂ ಸದಸ್ಯ ಪ್ರವೀಣ ಭರಮನಿ ಮಾತನಾಡಿ ಪಪಂ ಆಡಳಿತಾಧಿಕಾರಿಗಳ ಅವಧಿಯಲ್ಲಿ ರಾಜಕೀಯ ಮಾಡಿ ಒಂದೇ ವಾರ್ಡಿಗೆ 20ಲಕ್ಷ ಅನುದಾನ ಬಳಕೆಮಾಡಲು ಮುಂದಾಗಿದ್ದು ಇತರ ಸದಸ್ಯರಿಗೆ ಮಾಡಿದ ಅನ್ಯಾಯ ಹಾಗೂ ತಾರತಮ್ಯ ನೀತಿಯಾಗಿದೆ. ಈ ಕುರಿತು ಸೆ.4ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿಕೆ ಕ್ರೀಯಾಯೋಜನೆಗಳ ಮಂಜೂರಾತಿಗೆ ತಡೆ ಹಿಡಿಯಲು ಒತ್ತಾಯಿಸಿದ್ದೇವೆ. ಆದರೂ ಸಹ ರಾಜಕೀಯ ಒತ್ತಡ ತಂದು ಮಂಜೂರಾತಿಗೆ ಪ್ರಯತ್ನಿಸುತ್ತಿದ್ದಾರೆ. ಆಡಳಿತ ಪಕ್ಷದವರಾಗಿ ನಾವು ಅದಕ್ಕೆ ಅವಕಾಶ ನೀಡುವದಿಲ್ಲ ಎಂದರು.
ಸರ್ಕಾರದಿಂದ ಬರುವ ಅನುದಾನವನ್ನು ಪಟ್ಟಣದ ಅಭಿವೃದ್ದಿಗಾಗಿ ಹಾಗೂ ಅತಿಅವಶ್ಯವಿರುವ ವಾರ್ಡಗಳ ಕೆಲಸ ಕಾರ್ಯಗಳಿಗೆ ಅನುದಾನ ಬಳಕೆಯಾಗಬೇಕು. ಅದಕ್ಕಾಗಿ ವಿವಿಧ ಯೋಜನೆಯ ಉಳಿಕೆ ಮೊತ್ತದ 20.7 ಲಕ್ಷ ವೆಚ್ಚದ 15ನೇ ವಾರ್ಡಿಗೆ ಮಾತ್ರ ಕ್ರೀಯಾಯೋಜನೆ ಮಾಡಿದ ಪ್ರಮುಖ 6 ಕಾಮಗಾರಿಗಳಿಗೆ ಪಿಡಿ ಹಾಗೂ ಜಿಲ್ಲಾಧಿಕಾರಿಗಳು ತಡೆನೀಡಬೇಕೆಂದು ಒತ್ತಾಯಿಸಿದರು.
ಆಡಳಿತ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರೊಂದಿಗೆ ಚರ್ಚಿಸಿ ಅನುದಾನವನ್ನು ಎಲ್ಲಾ ವಾರ್ಡಗಳಿಗೆ ಹಂಚುವ ಕೆಲಸ ಮಾಡುತ್ತೇವೆ ಎಂದರು.
ಪಪಂ ಸದಸ್ಯರಾದ ಸಿದ್ದುಗೌಡ ಪಾಟೀಲ, ಸದಾಶಿವ ಸಂಕ್ರಟ್ಟಿ, ಭೀಮಪ್ಪ ಹೊಸಮನಿ, ಕರಿಯಪ್ಪ ಕುಂಬಾಳಿ, ಮುಖಂಡರಾದ ಸದಾಶಿವ ಹೊಸಟ್ಟಿ, ಸಿದ್ದು ಸಾಂಗ್ಲೀಕರ, ಮಹಾಲಿಂಗ ಪುರಾಣಿಕ, ಸಂಗಪ್ಪ ರಾಮದುರ್ಗ ಸೇರಿದಂತೆ ಹಲವರು ಇದ್ದರು.

# ಮಹಾನ್ ನಾಯಕರ ಆದರ್ಶ ತತ್ವ ಸಿದ್ಧಾಂತ ಜೀವನದಲ್ಲಿ ಅಳವಡಿಸಿಕೊಳ್ಳಿ: ಡಾ. ಶಫಿಯುಲ್ಲಾ

**ಕೊಪ್ಪಳ :** ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಸೇರಿದಂತೆ ನಮ್ಮ ದೇಶದ ಮಹಾನ್ ನಾಯಕರ ಆದರ್ಶಗಳನ್ನು ಮತ್ತು ಅವರ ತತ್ವ ಸಿದ್ಧಾಂತಗಳನ್ನು ಈ ದೇಶದ ಪ್ರತಿಯೊಬ್ಬ ನಾಗರಿಕರು ತಮ್ಮ ಜೀವನದಲ್ಲಿ ಆಡವಳಿಸಿಕೊಳ್ಳಬೇಕು ಎಂದು ಮಧುಮೇಹ ತಜ್ಞ ಡಾ, ಶಫಿವುಲ್ಲಾ ಹೇಳಿದರು. ಅವರು ಬುಧವಾರ ನಗರದ ಮಿಲ್ಲತ್ ಪಬ್ಲಿಕ್ ಶಾಲೆಯಲ್ಲಿ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ ವತಿಯಿಂದ ಏರ್ಪಡಿಸಿದ ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ ಸಮಾರಂಭ ದಲ್ಲಿ ಉದ್ಘಾಟಕರಾಗಿ ಆಗಮಿಸಿ ಅವರುಗಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಅರ್ಪಣೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮುಂದುವರಿದು ಮಾತನಾಡಿ ಇಂದಿನ ಮಕ್ಕಳೆ ಈ ನಾಡಿನ ಬಾವಿ ಪ್ರಜೆಗಳಾಗಿದ್ದು ಅವರ ಭವಿಷ್ಯ ಉಜ್ವಲ ಗೊಳ್ಳಲು ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರ ಕಲಿಸಿಕೊಡಬೇಕು ಎಂದರು, ಮಕ್ಕಳು ಸಹ ಸತತ ಪರಿಶ್ರಮ ದಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಜೀವನದಲ್ಲಿ ಒಂದು ಗುರಿ ಇಟ್ಟುಕೊಂಡು ಅದರ



ತಕ್ಕಂತೆ ಪರಿಶ್ರಮ ಪಡಬೇಕು ನಿರಂತರ ಪ್ರಯತ್ನದಿಂದ ಯಶಸ್ಸು ಕಾಣಲು ಸಾಧ್ಯವಾಗಿದೆ ಎಂದು ಮಧುಮೇಹ ತಜ್ಞಡಾ, ಶಫಿವುಲ್ಲಾ ಹೇಳಿದರು. ಮುಖ್ಯ ಅತಿಥಿಗಳಾಗಿ ಅಂಜುಮನ್ ಕಮಿಟಿ ಅಧ್ಯಕ್ಷ ಎಂ ಡಿ ಆಸಿಫ್ ಕರ್ಕಿಹಳ್ಳಿ ಮಾತನಾಡಿದರು ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ ವಹಿಸಿದ್ದರು, ಸಂಸ್ಥೆಯ ಕಾರ್ಯನಿರ್ವಾಹಕ ಸಂಚಾಲಕ ಸೈಯದ್ ಇಮಾಮ್ ಹುಸೇನ್ ಸಿಂದೋಗಿ, ಮುಖ್ಯ ಶಿಕ್ಷಕ ಮೊಹಮ್ಮದ್ ಅಜೀಜ್ ರೇವಡಿ ಸಹ ಶಿಕ್ಷಕರು ವಿದ್ಯಾರ್ಥಿಗಳು ಪಾಲಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಇದೇ ವೇಳೆ ಅತಿಥಿಗಳನ್ನು ಸನ್ಮಾನಿಸಲಾಯಿತು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State